ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
ಚಿನ್ನಸ್ವಾಮಿ ಕ್ರೀಡಾಂಗಣ, ರಾಜಭವನ ರಸ್ತೆ, ಬೆಂಗಳೂರು–01
ದೂರವಾಣಿ : (080)-22865450 ಫ್ಯಾಕ್ಸ್ : (080)-22869016

**Karnataka Rural Infrastructure Development Limited**
Chinnaswamy Stadium, Rajbhavan Road, Bangalore-560001
Tel - (080)-22865450 Fax - (080)-22869016

Email: mdkridl@gmail.com www.kridl.gov.in

# 37ನೇ ವಾರ್ಷಿಕ ವರದಿ
# 37th ANNUAL REPORT 2010-2011

## Changing Lives Making the Difference



ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
Karnataka Rural Infrastructure Development Limited



*Happy Moments :*

Sri S.I. Chikkanagoudar, Hon'ble MLA Kundgol Constituency & Chairman, KRIDL and Sri C.K. Shivanna, IFS, Managing Director, are lighting the lamp during Raising Day Celebrations of KRIDL. Sri V.B. Kupsad, GM-Works Sri Rangarajan, GM-Works, Sri Venkatesh Murthy, GM-Works and Sri Aithal former GM-Works were also present.



Donation of Rs. 10.00 lakhs to KIDWAI Hospital Bangalore for Construction of RAMP for the use of Patients





**Sri D.V. Sadananda Gowda**
Hon'ble Chief Minister
Government of Karnataka



**Sri Jagadish Shettar**
Hon'ble Minister for
Rural Development &
Panchayat Raj



**Sri S.I. Chikkanagoudar**
Hon'ble MLA, Kundgol Constituency
& Chairman, K.R.I.D.L.



**Dr. Amita Prasad,** IAS
Principal Secretary to Government
Rural Development &
Panchayat Raj Department



**Sri C.K. Shivanna,** IFS
Managing Director
Karnataka Rural Infrastructure
Development Limited

# CONTENTS


01 ಸದಸ್ಯರಿಗೆ ನೀಡಿದ ನೋಟಿಸ್
Notice to Member

03 ಮಂಡಳಿ ನಿರ್ದೇಶಕರ ಪಟ್ಟಿ
Composition of Board of Director

05 ನಿರ್ದೇಶಕರ ವರದಿ
Directors Report

15 ಮಹಾಲೇಖಪಾಲರ ವರದಿ
Comments of the Comptroller & Auditor General

16 ಲೆಕ್ಕ ಪರಿಶೋಧಕರ ಆಕ್ಷೇಪಣೆಗಳಿಗೆ ಉತ್ತರ
Reply to statutory Auditors observation

21 ಲೆಕ್ಕ ಪರಿಶೋಧಕರ ವರದಿ
Auditors Report

29 ಆಯವ್ಯಯ ಪತ್ರ
Balance Sheet

32 ಲಾಭ ಮತ್ತು ನಷ್ಟದ ತಃಖ್ತೆ
Profit & Loss Account

35 ಹಣಕಾಸು ನಗದು ಹರಿಯುವಿಕೆಯ ತ:ಖ್ತೆ
Cash Flow Statement

38 ಆಯವ್ಯಯ ಮತ್ತು ಲಾಭ ನಷ್ಟದ ತಃಖ್ತೆಯ ಅನುಸೂಚಿಗಳು
Schedule to the Balance Sheet and
Profit & Loss Account

72 ಹೆಚ್ಚುವರಿ ಮಾಹಿತಿ
Additional Information

## BREAKUP OF VALUE OF WORK DONE




(Rs.in crore)

| | |
|---|---|
| Suvarna Grama Yojana | 160.00 |
| Aasare House | 113.00 |
| BBMP Works | 82.00 |
| Social Welfare | 26.00 |
| BMRCL | 21.00 |
| Tourism | 5.00 |
| Local Works | 192.51 |
| **Total** | **599.51** |

## TURN AROUND OF THE COMPANY




(Rs.in crore)

| | |
|---|---|
| 2007-08 | 205.06 |
| 2008-09 | 344.86 |
| 2009-10 | 380.21 |
| 2010-11 | 599.51 |
| 2011-12 | 800.00 Projected |



# Vision, Mission, Objective & Quality Policy

**ಧ್ಯೇಯ:**

- ಕರ್ನಾಟಕದಲ್ಲಿಯೇ ಶ್ರೇಷ್ಠ ಹಾಗೂ ಸಮರ್ಥ ಸಾರ್ವಜನಿಕ ವಲಯದ ಕಂಪನಿಯಾಗಿ ಹೊರಹೊಮ್ಮುವುದು.
- ನಿರ್ಮಾಣ ವ್ಯವಸ್ಥೆಯಲ್ಲಿಯೇ ಮುಂಚೂಣಿ ಸ್ಥಾನ ಪಡೆಯುವುದು.
- ಗುಣಮಟ್ಟದ ಮತ್ತು ಮಿತವ್ಯಯದ ಸೇವೆ ಒದಗಿಸುವುದು.
- ಒಟ್ಟಾರೆಯಾಗಿ ಅತ್ಯುತ್ತಮ ಸೇವೆಯೇ ಗುರಿ.

**ಉದ್ದೇಶ:**

- ಬೆಲೆ ಮತ್ತು ಸಮಯ ವಿಳಂಬವಾಗುವುದನ್ನು ತಪ್ಪಿಸುವುದು.
- ಗ್ರಾಹಕರ ಅಗತ್ಯಗಳಿಗೆ ತಕ್ಷಣ ಸ್ಪಂದನೆ.
- ಕೆಆರ್‌ಐಡಿಎಲ್ ಮಾಡಬಹುದಾದ ಎಲ್ಲಾ ಕಾರ್ಯಗಳಲ್ಲಿ ವಿಶ್ವಾಸಾರ್ಹತೆ ಗಳಿಸುವುದು ಮತ್ತು ಈ ಕ್ಷೇತ್ರದಲ್ಲಿಯೇ ಗೆಲುವು ಸಾಧಿಸುವುದು.
- ಬದ್ಧತೆಯುಳ್ಳ ಸಿಬ್ಬಂದಿವರ್ಗ.

**ಗುರಿ:**

ಅಭಿವೃದ್ಧಿ ಸಾಧಿಸಲು ಮೂಲಸೌಕರ್ಯಗಳ ಕಾಮಗಾರಿಗಳು ಅತೀ ಪ್ರಮುಖವಾದದ್ದಾಗಿದ್ದು, ಇದಕ್ಕಾಗಿ ಅಗತ್ಯ ಕಾರ್ಮಿಕರನ್ನು ಒದಗಿಸಬೇಕಾಗಿರುವುದರಿಂದ ಗ್ರಾಮೀಣ ಪ್ರದೇಶದ ನಿರುದ್ಯೋಗಿಗಳಿಗೆ ಹಾಗೂ ಕಡಿಮೆ ಉದ್ಯೋಗವಿಲ್ಲದವರಿಗೆ ಉದ್ಯೋಗ ಅವಕಾಶ ನೀಡುವ ಮೂಲಕ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಿವುದು.

ಮಧ್ಯವರ್ತಿಗಳನ್ನು ದೂರವಿಟ್ಟು, ಅಂದರೆ, ಗ್ರಾಮೀಣ ಬಡತನವನ್ನು ದುರುಪಯೋಗಪಡಿಸಿಕೊಳ್ಳುವ ಗುತ್ತಿಗೆದಾರರನ್ನು ದೂರಸರಿಸಿ, ಆ ಮೂಲಕ ಸಾರ್ವಜನಿಕರ ಹಣವನ್ನು ಸದ್ವಿನಿಯೋಗ ಪಡಿಸಲು, ನೇರವಾಗಿ ಗ್ರಾಮೀಣ ಪ್ರದೇಶದ ಎಲ್ಲಾ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು.

**ಗುಣಮಟ್ಟದ ನೀತಿ:**

ಕೆಆರ್‌ಐಡಿಎಲ್ ಉದ್ಯಮದ ಮಾನದಂಡಗಳಿಗೆ ಜವಾಬ್ದಾರಿಯುತವಾಗಿಲು, ಅಂದರೆ ಕೇವಲ ಗುಣಮಟ್ಟ ಹಾಗೂ ಮೌಲ್ಯ ಒಂದೇ ಅಲ್ಲ ಕಾರ್ಯದಕ್ಷತೆಯನ್ನು ಸಾಧಿಸುವ ಮೂಲಕ ತನ್ನ ಸೇವೆಯಲ್ಲಿ ಯಶಸ್ಸು ಸಾಧಿಸಲು ಬದ್ಧವಾಗಿದೆ.ನಾವು ನಿರಂತರವಾಗಿ ನಮ್ಮ ವ್ಯವಹಾರದಲ್ಲಿ ಉತ್ತಮವೆಂದು ಹೆಸರು ಪಡೆಯುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದು, ಅದಕ್ಕಾಗಿ ಅಧಿಕ ನಿರೀಕ್ಷೆಗಳನ್ನು ಮತ್ತು ಕಡಿಮೆ ಸಮಯದಲ್ಲಿಯೇ ಕರಾರುವಕ್ಕಾದ ಸೇವೆಯನ್ನು ಸಾಧಿಸುವ ಸಂಸ್ಕೃತಿಗೆ ನಾಂದಿ ಹಾಡಲಿದ್ದೇವೆ. ವಿಶ್ವಾಸಾರ್ಹತೆಯೆ ಎಲ್ಲದಕ್ಕೆ ಅಗತ್ಯವಿದ್ದು, ನಂಬಿಕೆಯನ್ನೆ ನೆಚ್ಚಿಕೊಂಡಿದ್ದು, ಪ್ರತಿಯೊಬ್ಬರು ಜವಾಬ್ದಾರಿಗೆ ಬದ್ಧರಾಗಿದ್ದೇವೆ. ಅಭಿವೃದ್ಧಿಯಲ್ಲಿ ಪಾರದರ್ಶಕತೆಯನ್ನು ನೀಡುವ ಭರವಸೆಯಿದ್ದು, ದಕ್ಷ ಸೇವೆಯೆ ನಮ್ಮ ಪ್ರತಿಷ್ಠೆಯನ್ನು ಕಾಯುತ್ತದೆ.

**Vision**

- To be the Best and Most Efficient Public Sector Company in Karnataka
- To be leader in construction management
- Quality & Economical Deliverables
- Overall superior service

**Mission**

- To avoid cost and time overrun
- Quick response to customer needs
- Credibility in everything KRIDL does and to be winners in the field
- Committed Manpower

**Objective**

To concentrate on labour intensive infrastructure works which are vital for development by providing employment opportunities to rural unemployed and under employed to improve their economic conditions.

To undertake all rural development construction works directly by eliminating middlemen, i.e., contractors, to avoid exploitation of the rural poor, thereby passing on the full worth of money to the people.

**Quality Policy**

KRIDL is committed to enhancing its success with services and responsiveness that set industry standards for not only quality and value, but for efficiency as well. We relentlessly strive to be the best in every aspect of our business, fostering a culture of high expectations and accurate delivery- at quick turn-around times. Credibility is everything, trust is inherent and responsibility lies with each individual. Transparent processes guarantee progression and efficient delivery controls reputation.

# Completed Projects...



Secretary quarters - Malenadu Area Development Board (MADB)
At Shimoga



District Indoor Stadium, Dharwad



Residence for Director General - ATI at Mysore



Renovation of Sir M. Vishveshwaraiah's Birth Place
Muddenahalli, Chikkaballapur Dist.



Sevalal Temple at Sooragondanakoppa, Honnali.



Girls Dormitory Block for MDRS at Kerethonnuru
Pandavapura Tq.

# ಆಡಳಿತ ಮಂಡಳಿ ನಿರ್ದೇಶಕರುಗಳು
# COMPOSITION OF BOARD OF DIRECTORS

## ಅಧ್ಯಕ್ಷರು / CHAIRMAN

**Sri P. Ravikumar,** I.A.S.
Principal Secretary to Govt, RD&PR Department & I/c Chairman, KRIDL,
(w.e.f. 18-06-2009 to 20-04-2010)
(In place of Smt.Tara Ajai Singh, I.A.S.,)

**ಶ್ರೀ ಪಿ. ರವಿಕುಮಾರ್,** ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮತ್ತು ಅಧ್ಯಕ್ಷರು, ಕೆಆರ್‌ಐಡಿಎಲ್, ಬೆಂಗಳೂರು. (ದಿ:18-06-2009 ರಿಂದ 20-04-2010)
(ಶ್ರೀಮತಿ ತಾರಾ ಅಜಯ್ ಸಿಂಗ್, ಭಾ.ಆ.ಸೇ. ರವರ ಸ್ಥಾನದಲ್ಲಿ)

**Sri N. Gokul Ram,** I.A.S.
Chairman, KRIDL
(w.e.f. 21-04-2010 to 01-11-2010)
(In place of Sri P. Ravikumar, I.A.S.,)

**ಶ್ರೀ ಎನ್. ಗೋಕುಲ್ ರಾಂ,** ಭಾ.ಆ.ಸೇ.
ಅಧ್ಯಕ್ಷರು, ಕೆಆರ್‌ಐಡಿಎಲ್
(ದಿ:21-04-2010 ರಿಂದ ದಿ:01-11-2010)
(ಶ್ರೀ ಪಿ. ರವಿಕುಮಾರ್, ಭಾ.ಆ.ಸೇ., ರವರ ಸ್ಥಾನದಲ್ಲಿ)

**Sri S.I. Chikkanagoudar**
Hon'ble MLA, Kundgol Constituency
& Chairman, K.R.I.D.L.
(w.e.f. 20-11-2010 to till date)
(In place of Sri Late N. Gokul Ram, I.A.S.,)

**ಶ್ರೀ ಎಸ್.ಆಯ್. ಚಿಕ್ಕನಗೌಡ್ರ**
ಮಾನ್ಯ ಶಾಸಕರು ಕುಂದಗೋಳ ಕ್ಷೇತ್ರ
ಮತ್ತು ಅಧ್ಯಕ್ಷರು, ಕೆಆರ್‌ಐಡಿಎಲ್
(ದಿ:20-11-2010 ರಿಂದ ಇಲ್ಲಿಯವರೆಗೆ)
(ಶ್ರೀ ದಿ|| ಎನ್. ಗೋಕುಲ್ ರಾಂ, ಭಾ.ಆ.ಸೇ., ರವರ ಸ್ಥಾನದಲ್ಲಿ)

## ವ್ಯವಸ್ಥಾಪಕ ನಿರ್ದೇಶಕರು / MANAGING DIRECTOR

**Sri Ashok Kumar Singh,** I.F.S.
Managing Director, KRIDL, (w.e.f. 23-07-2008 to 06-07-2011)
(In place of Sri.C.M.Shirol, I.A.S.,)

**ಶ್ರೀ ಅಶೋಕ್ ಕುಮಾರ್ ಸಿಂಗ್,** ಭಾ.ಅ.ಸೇ.
ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್., (ದಿ:23-07-2008 ರಿಂದ 06-07-2011)
(ಶ್ರೀ.ಸಿ.ಎಂ.ಶಿರೋಳ್ ಭಾ.ಆ.ಸೇ., ಇವರ ಸ್ಥಾನದಲ್ಲಿ)

**Sri C.K. Shivanna,** I.F.S.
Managing Director, KRIDL, (w.e.f. 07-07-2011 to till date)
(In place of Sri Ashok Kumar Singh, I.F.S.,)

**ಶ್ರೀ ಸಿ.ಕೆ. ಶಿವಣ್ಣ,** ಭಾ.ಅ.ಸೇ.
ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್., (ದಿ:07-07-2011 ರಿಂದ ಇಲ್ಲಿಯವರೆಗೆ)
(ಶ್ರೀ ಅಶೋಕ್ ಕುಮಾರ್ ಸಿಂಗ್, ಭಾ.ಅ.ಸೇ., ಇವರ ಸ್ಥಾನದಲ್ಲಿ)

## ನಿರ್ದೇಶಕರುಗಳು / PRESENT DIRECTORS

**Dr. Amita Prasad,** I.A.S.
Principal Secretary to Govt, RD&PR Department,
(w.e.f. 13-06-2011 to till date)

**ಡಾ. ಅಮಿತ ಪ್ರಸಾದ್,** ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
(ದಿ: 13-06-2011 ರಿಂದ ಇಲ್ಲಿಯವರೆಗೆ)

**Sri Anil Kumar Jha,** I.A.S.
Secretary to Govt., Finance Department (Expenditure)
(w.e.f. 01-04-2008 to till date) (In place of Sri.M.R.Kamble)

**ಶ್ರೀ ಅನಿಲ್ ಕುಮಾರ್ ಜಾ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು, ಹಣಕಾಸು ಇಲಾಖೆ (ವೆಚ್ಚ)
(ದಿ:01-04-2008 ರಿಂದ ಇಲ್ಲಿಯವರೆಗೆ) (ಶ್ರೀ.ಎಂ.ಆರ್. ಕಾಂಬ್ಳೆ, ಭಾ.ಆ.ಸೇ.,ರವರ ಸ್ಥಾನದಲ್ಲಿ)

**Sri B.G. Gurupada Swamy,** K.E.S.
Secretary to Government, Water Resources Department
(w.e.f. 13-06-2011 to till date) (In place of Sri P.N.Srinivasa Chari, I.A.S.,)

**ಶ್ರೀ ಬಿ.ಜಿ. ಗುರುಪಾದ ಸ್ವಾಮಿ,** ಕೆ.ಇ.ಎಸ್.,
ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ (ದಿ:13-6-2011 ರಿಂದ ಇಲ್ಲಿಯವರೆಗೆ)
(ಶ್ರೀ.ಪಿ.ಎನ್ ಶ್ರೀನಿವಾಸಚಾರಿ, ಭಾ.ಆ.ಸೇ., ರವರ ಸ್ಥಾನದಲ್ಲಿ)

**Sri Naveen Raj Singh,** I.A.S.
Commissioner, Social Welfare Department
(w.e.f. 13-06-2011 to till date) (In place of Sri N.Manjunath Prasad, I.A.S.,)

**ಶ್ರೀ ನವೀನ್ ರಾಜ ಸಿಂಗ್,** ಭಾ.ಆ.ಸೇ.,
ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ (ದಿ:13-06-2011 ರಿಂದ ಇಲ್ಲಿಯವರೆಗೆ)
(ಶ್ರೀ. ಎನ್ ಮಂಜುನಾಥ್ ಪ್ರಸಾದ್, ಭಾ.ಆ.ಸೇ., ರವರ ಸ್ಥಾನದಲ್ಲಿ)

**Sri P.A. Meghannavar,** I.A.S.,
Director, Rural Infrastructure Development and
Ex-officio, Joint Secretary to Govt. RD&PR
(w.e.f. 28-01-2011 to till date)

**ಶ್ರೀ ಪಿ.ಎ. ಮೇಘಣ್ಣನವರ್,** ಭಾ.ಆ.ಸೇ.,
ನಿರ್ದೇಶಕರು, ಗ್ರಾಮೀಣ ಮೂಲಭೂತ ಅಭಿವೃದ್ಧಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
(ದಿ: 28-01-2011 ರಿಂದ ಇಲ್ಲಿಯವರೆಗೆ)

**Sri K.B. Devaraj**
Secretary to Govt., Public Works Department
(w.e.f. 08-09-2011 to till date) (In place Sri Mruthyunjaya Swamy, K.A.S.,)

**ಶ್ರೀ ಕೆ.ಬಿ. ದೇವರಾಜ್**
ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ
(ದಿ:08-09-2011 ರಿಂದ ಇಲ್ಲಿಯವರೆಗೆ) (ಶ್ರೀ. ಮೃತ್ಯುಂಜಯ ಸ್ವಾಮಿ, ಕೆ.ಎ.ಎಸ್., ರವರ ಸ್ಥಾನದಲ್ಲಿ)

**Sri Prabhakar H. Chini,** K.E.S.
Chief Engineer, Panchayat Raj Engineering Department
(w.e.f. 28-06-2010 to till date) (In place of Sri R.P.Kulkarni)

**ಶ್ರೀ ಪ್ರಭಾಕರ್ ಹೆಚ್. ಚಿನಿ,** ಕೆ.ಇ.ಎಸ್.,
ಮುಖ್ಯ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
(ದಿ: 28-06-2010 ರಿಂದ ಇಲ್ಲಿಯವರೆಗೆ) (ಶ್ರೀ. ಆರ್.ಪಿ. ಕುಲಕರ್ಣಿ ಇವರ ಸ್ಥಾನದಲ್ಲಿ)

**Sri R.S. Phonde**
Special Officer and Ex-officio, Deputy Secretary to Govt.,
PWD (Finance Cell) (w.e.f. 17-02-2009 to till date)

**ಶ್ರೀ ಆರ್.ಎಸ್. ಫೋಂಡೆ**
ವಿಶೇಷಾಧಿಕಾರಿಗಳು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು,
ಲೋಕೋಪಯೋಗಿ ಇಲಾಖೆ (ಹಣಕಾಸು ವಿಭಾಗ) (ದಿ: 17-02-2009 ರಿಂದ ಇಲ್ಲಿಯವರೆಗೆ)



Aasare houses at Nandgav & Dhavaleshwar of Bagalkot District



Aasare houses at Takali Village, Afzalpur Tq. in Gulbarga Dist

# Completed Projects...



Dr. S.M. Pandith Rangamandira, Gulbarga



Inauguration of S.M. Pandit Rangamandira at Gulbarga by Her Excellency Smt. Pratibha Devisingh Patil, the President of India.



Girls Hostel Block for M.D.R.S., Beekanahalli



T.T.M.C. Building for B.M.T.C. Bangalore



Export Processing unit for IFAB at Hebbal, Bangalore



Swimming Pool at Chadrashekar Patil Stadium Gulbarga

# Completed Projects...



Construction of New faculty block-2 for ATI at Mysore



Sri. Maishasura Statue works at Bellary
Sri. Kanakadurga Statue at Bellary



Belgaum Institute of Medical Science at Belgaum




Construction of Indoor Stadium at Kudige, Somavarpet Taluk



Zilla Panchayat Meeting Hall at Chamarajnagar Town



Rehabilitation Group House Project for Metro Rail displaced families at Peenya, Bangalore

# Completed Projects...





S.S.L.R. Office Interiors at Bangalore

# Upcoming Projects



Veterinary College Building at Athani



Chaluvadi Bhavan at Nagarbhavi

# Upcoming Projects



B-Type Quarters at Athani for K.V.A.F.S. University at Bidar




Teaching Staff Quarters for MDRS - KREIS
Bavanahalli, Madikeri District




Kitchen and Dining Block for MDRS - KREIS at
Karkala-Udupi




Proposed Veterinary College at Athani for KVAFSU, Bidar

# Completed Projects...



Pre-Metric Girls Hostel for Minorities, Belgaum



CTI Centre for Drivers of KSRTC at Hassan



District Consumer Redressal Forum, Mandya



SC/ST Girls Post Metric Hostel at Sadashiv Nagar, Belgaum



T. Channaiah Park at Chikkaballapur



Premetric SC/ST Boys Hostel @ Kurugod, Bellary Dist

# Upcoming Projects



Guest House at Athani




Proposed Educational Institution for Bhovi Community at Mahalakshmi Layout, Bangalore



Academic Block for MDRS, Karnataka Residential Educational Institutions Society, Madikeri




Proposed BSDB Office at Chitradurga

# CORPORATE SOCIAL RESPONSIBILITY

KRIDL proactively undertakes and supports Corporate Social Responsibility ( CSR) activities. Planting trees is an effective direct contribution towards reducing carbon emissions and sending a strong visible signal in support of keeping Bangalore healthy and clean for its citizens while also taking care of our planet. KRIDL has participated in Bangalore City's Green initiatives of planting trees by fencing and protecting more than 1,250 saplings.



# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು
## ನಿಗಮವು ಅಸ್ತಿತ್ವಗೊಂಡ ವರ್ಷದಿಂದ ಇಲ್ಲಿಯವರೆಗೆ ಸಾಧಿಸಿದ ಪ್ರಗತಿ (ರೂ. ಕೋಟಿಗಳಲ್ಲಿ)

### Performance of the Company since inception
### NET PROFIT/LOSS (Rs. In Crore)




# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು
## ನಿಗಮವು ಅಸ್ತಿತ್ವಗೊಂಡ ವರ್ಷದಿಂದ ಇಲ್ಲಿಯವರೆಗೆ ಸಾಧಿಸಿದ ಪ್ರಗತಿ (ರೂ. ಕೋಟಿಗಳಲ್ಲಿ)

### Performance of the Company since Inception
### Turn Over (Rs. in Crore)



## ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು

## Karnataka Rural Infrastructure Development Limited, Bangalore

ಸಂಖ್ಯೆ. ಕೆಆರ್‌ಐಡಿಎಲ್/ಎಡಿಎಂ/37ನೇ ಎಜಿಎಂ/2011–12
ದಿನಾಂಕ: 17ನೇ ಡಿಸೆಂಬರ್ 2011

### ಸದಸ್ಯರಿಗೆ ಸೂಚನಾ ಪತ್ರ

### 37ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ

37ನೇ ವಾರ್ಷಿಕ ಸಾಮಾನ್ಯ ಸಭೆಯನ್ನು 24ನೇ ಡಿಸೆಂಬರ್ 2011ರ ಶನಿವಾರ ಬೆಳಿಗ್ಗೆ 10.30 ಗಂಟೆಗೆ ಕಮಿಟಿ ಕೊಠಡಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು – 560 001ರಲ್ಲಿ ಈ ಕೆಳಗಿನ ಸಾಮಾನ್ಯ ವಿಷಯಗಳ ಚರ್ಚೆಗಾಗಿ ಕರೆಯಲಾಗಿದೆ ಎಂದು ಈ ಮೂಲಕ ಸೂಚಿಸಲಾಗಿದೆ.

**ಸಾಮಾನ್ಯ ವ್ಯವಹಾರಗಳು:–**

1. 31ನೇ ಮಾರ್ಚ್ 2011ರ ಆಯವ್ಯಯ ಪತ್ರ, ಲಾಭ ಮತ್ತು ನಷ್ಟದ ಲೆಕ್ಕ, ನಿರ್ದೇಶಕರ ವರದಿ, ಲೆಕ್ಕ ಪರಿಶೋಧಕರ ವರದಿ ಮತ್ತು ಭಾರತ ಸರ್ಕಾರದ ಆಡಿಟರ್ ಜನರಲ್‌ರ ಟೀಕೆ–ಟಿಪ್ಪಣಿಗಳನ್ನು ಕಂಪನಿ ಕಾಯ್ದೆ 1956 ಅಧಿನಿಯಮ 619(4)ರ ಪ್ರಕಾರ ತಿಳಿಯಲು ಮತ್ತು ಅದನ್ನು ಅಂಗೀಕರಿಸಿ ಕಾರ್ಯರೂಪಕ್ಕೆ ತರಲು ನಿರ್ಧರಿಸಲಾಗಿದೆ.
2. 2010–11ನೇ ಸಾಲಿನ ಲಾಭಾಂಶ ಘೋಷಣೆ
3. ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಪಾಲಕರು ಇವರಿಂದ ನೇಮಕಗೊಂಡ ಲೆಕ್ಕ ಪರಿಶೋಧಕರ ಸಂಭಾವನೆಯನ್ನು ನಿಗದಿಪಡಿಸುವ ಬಗ್ಗೆ.

ನಿರ್ದೇಶಕ ಮಂಡಳಿ ಆದೇಶದ ಮೇರೆಗೆ
ಸಹಿ/–
**(ಸಿ.ಕೆ. ಶಿವಣ್ಣ, ಐ.ಎಫ್.ಎಸ್)**
ವ್ಯವಸ್ಥಾಪಕ ನಿರ್ದೇಶಕರು

ಸ್ಥಳ : ಬೆಂಗಳೂರು.
ದಿನಾಂಕ : 17–12–2011

No.KRIDL/ADM/37th AGM/2011-12
Date : 17th December 2011

### NOTICE TO MEMBERS

### NOTICE OF THE THIRTY SEVENTH ANNUAL GENERAL MEETING

Notice is, hereby given that the 37th Annual General Meeting of the Company will be held on Saturday the 24th December 2011 at 10.30 A.M. at the Committee Room, Rural Development and Panchayat Raj Department, M.S.Buildings, Bangalore - 560001 to transact the following business :-

**ORDINARY BUSINESS:-**

1. To receive, consider and adopt the Audited Balance Sheet as on 31st March 2011, Profit and Loss Account for the year ended on that date along with the Auditor's Report, Directors' Report thereon and the comments of the Comptroller and Auditor General of India under Section-619(4) of the Companies Act 1956.
2. To declare dividend for the financial year 2010-11.
3. To fix remuneration of the Auditors appointed by the Comptroller and Auditor General of India.

By the order of Board,
Sd/-
**(C.K.SHIVANNA, I.F.S.)**
MANAGING DIRECTOR

Place: Bangalore
Dated: 17-12-2011

**ಸೂಚನೆ:** ಸಭೆಗೆ ಹಾಜರಾಗಲು ಅರ್ಹರಾದ ಸದಸ್ಯರು ತಮ್ಮ ಅನುಪಸ್ಥಿತಿಯಲ್ಲಿ ಒಬ್ಬ ಪ್ರಾಕ್ಸಿಯನ್ನು ನೇಮಿಸಬಹುದು. ಅವರು ನಿಗಮದ ಸದಸ್ಯರಾಗದಿದ್ದರೂ ಮತದಾನದಲ್ಲಿ ಪಾಲ್ಗೊಂಡು ಮತ ಚಲಾಯಿಸಲು ಮಾತ್ರ ಅರ್ಹರು.

ಯಥಾ ಪ್ರತಿಯನ್ನು

- ಶ್ರೀ ಎಸ್.ಐ. ಚಿಕ್ಕನಗೌಡ್ರ, ಅಧ್ಯಕ್ಷರು, ಕೆ.ಆರ್.ಐ.ಡಿ.ಎಲ್., ಬೆಂಗಳೂರು.
- ಡಾ॥ ಅಮಿತ ಪ್ರಸಾದ್., ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು.
- ಶ್ರೀ.ಸಿ.ಕೆ. ಶಿವಣ್ಣ, ಭಾ.ಅ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಬೆಂಗಳೂರು.
- ಶ್ರೀ ನವೀನ್ ರಾಜ್ ಸಿಂಗ್, ಭಾ.ಆ.ಸೇ., ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು,
- ಸರ್ಕಾರದ ಕಾರ್ಯದರ್ಶಿಗಳು, ಹಣಕಾಸು ಇಲಾಖೆ (ಆಯವ್ಯಯ ಸಂಪನ್ಮೂಲ), (ರಾಜ್ಯಪಾಲರ ಪ್ರತಿನಿಧಿ), ವಿಧಾನಸೌಧ, ಬೆಂಗಳೂರು.

**Note:** A member entitled to attend and vote at a meeting is entitled to appoint a proxy to attend and vote on his behalf only on a poll, such proxy need not be a member of the company.

To,

- Sri S.I. Chikkanagoudra, Chairman, KRIDL.
- Dr.Amita Prasad, I.A.S., Principal Secretary to Government, RD&PR Department.
- Sri C.K.Shivanna, I.F.S., Managing Director, KRIDL, Bangalore
- Sri Naveen Raj Singh, I.A.S., Commissioner, Social Welfare Department, M.S. Building, Bangalore
- Secretary to Government, Finance Department (Budget and Resources) (Nominee to Hon'ble Governor of Karnataka), Vidhanasoudha, Bangalore.

# ನಿರ್ದೇಶಕರ ವರದಿ
# DIRECTORS' REPORT

ಸದಸ್ಯರುಗಳಿಗೆ,

2011ರ ಮಾರ್ಚ್ 31ಕ್ಕೆ ಕೊನೆಯಾಗುವ ಪರಿಶೋಧಿತ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧಕರ ವರದಿಯೊಂದಿಗೆ 37ನೇ ವಾರ್ಷಿಕ ವರದಿಯನ್ನು ಮಂಡಿಸಲು ನಿರ್ದೇಶಕರುಗಳಿಗೆ ಸಂತಸವಾಗಿದೆ.

## ಅವಲೋಕನ

ಕಂಪನಿಯು ಪ್ರಸಕ್ತ ಸಾಲಿನಲ್ಲಿ ತನ್ನ ಇತಿಹಾಸದಲ್ಲೇ ಅತಿ ಹೆಚ್ಚು ವಹಿವಾಟಾದ ರೂ.599.51 ಕೋಟಿ ಸಾಧನೆ ಮಾಡಿದೆ. ಇದು ಕಳೆದ ವರ್ಷದ ವಹಿವಾಟದ ರೂ.380.21 ಕೋಟಿಗಳಿಗಿಂತ ಶೇಕಡ 57.68 ರಷ್ಟು ಹೆಚ್ಚಾಗಿರುತ್ತದೆ. ಕಂಪನಿಯ ವಹಿವಾಟು ಹೆಚ್ಚಲು ಮುಖ್ಯ ಕಾರಣವೆಂದರೆ, ಪ್ರವಾಹಕ್ಕೆ ಒಳಗಾದ ಉತ್ತರ ಕರ್ನಾಟಕದಲ್ಲಿ ಅಂದಾಜು ವೆಚ್ಚ ರೂ.150.31 ಕೋಟಿ ಆಸರೆ ಕಾಮಗಾರಿಯನ್ನು ವಹಿಸಿದ್ದು, ಕಂಪನಿಯು ರೂ.16.61 ಕೋಟಿ ನಿವ್ವಳ ಲಾಭ ಮಾಡಿದ್ದು, ಇದು ರೂ.13.83 ಕೋಟಿ ಆದಾಯ ತೆರಿಗೆ, ಬಾಕಿ ಸಾಲ ರೂ.4.40 ಕೋಟಿಗಳು ಮತ್ತು ರೂ.1.59 ಕೋಟಿಗಳಷ್ಟು ಅನುಗ್ರಹ ಭತ್ಯೆಯನ್ನು ನೌಕರರಿಗೆ ನೀಡಲು ಒದಗಣೆ ಮಾಡಿದ ನಂತರ ಗಳಿಸಿದೆ.

ಕಂಪನಿಯು ತನ್ನ ಇತಿಹಾಸದಲ್ಲಿ ಸತತ ಎರಡನೇ ವರ್ಷದಲ್ಲಿ ಶೇಕಡ 10 ರಷ್ಟು ಷೇರು ಬಂಡವಾಳದ ಮೇಲೆ ರೂ.1.22 ಕೋಟಿಯನ್ನು ಸರ್ಕಾರಕ್ಕೆ ಡಿವಿಡೆಂಟ್ ಆಗಿ ಲಾಭಾಂಶದಲ್ಲಿ ಘೋಷಣೆ ಮಾಡಿದೆ.

ಕಂಪನಿಯ ಆಸ್ತಿ ಪ್ರಸಕ್ತ ಸಾಲಿನಲ್ಲಿ ಶೇಕಡ 22.83 ರಷ್ಟು ಹೆಚ್ಚಾಗಿದ್ದು, ರೂ.66.48 ಕೋಟಿಗಳಿಂದ ರೂ.81.66 ಕೋಟಿಗಳಿಗೆ ತಲುಪಿದೆ. ಈ ಹೆಚ್ಚಳಕ್ಕೆ ಮುಖ್ಯ ಕಾರಣಗಳೆಂದರೆ, ಕಂಪನಿಯು ಸಾಧಿಸಿರುವ ಹೆಚ್ಚಿನ ವಹಿವಾಟು ಮತ್ತು 2008-09 ರ ನಂತರ ಸತತವಾಗಿ ಗಳಿಸುತ್ತಿರುವ ನಿವ್ವಳ ಲಾಭ.

ತಾರೀಖು 31.03.2011ರ ಅಂತ್ಯದಲ್ಲಿ ಪೂರ್ಣಗೊಳಿಸಿ ಹೊಂದಾಣಿಕೆ ಮಾಡದೆ ಇದ್ದ ಕಾಮಗಾರಿಗಳ ಮೊತ್ತ ರೂ.983.12 ಕೋಟಿ ಇದ್ದು ಕಳೆದ ಸಾಲಿನಲ್ಲಿ ರೂ.728.08 ಕೋಟಿ ಇತ್ತು. ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ.346.05 ಕೋಟಿಗೆ ಅನುಗುಣವಾಗಿ ರೂ.226.10 ಕೋಟಿಗಳನ್ನು ಅಂತಿಮ ಬಿಲ್ಲುಗಳನ್ನು ಹೊಂದಾಣಿಕೆ ಮಾಡಿಕೊಂಡು, ಹಿಂದಿನ ವರ್ಷದಲ್ಲಿ ಬಾರದೇ ಇರುವ ಸಾಲಗಳ ಮೊತ್ತ ರೂ.2.82 ಕೋಟಿಗೆ ಬದಲಾಗಿದೆ ರೂ.3.04 ಕೋಟಿಗಳು ಹೊಂದಾಣಿಕೆಯಾಗಿದೆ. ಅಂತಿಮ ಬಿಲ್ಲುಗಳ ಹೊಂದಾಣಿಕೆಯಿಂದ ಪ್ರಸ್ತುತ ವರ್ಷದಲ್ಲಿ ರೂ.107.90 ಲಕ್ಷ ಆದಾಯ ಬಂದಿರುತ್ತದೆ ಹಾಗೂ ಹಿಂದಿನ ವರ್ಷದಲ್ಲಿ ರೂ.76.19 ಲಕ್ಷ ಆದಾಯ ಬಂದಿರುತ್ತದೆ.

To

The Members,

Your Directors have pleasure in presenting this 37th Annual Report of the company along with the Audited Statement of Accounts and Auditors' Report for the year ended 31st March 2011.

## OVERVIEW

Your Board is pleased to report that the Company achieved all time high and the highest ever turnover of Rs.599.21 Crores as against the previous year's turnover of Rs.380.21 Crores. The increase in turnover is about 57.68% over that of the previous year. Increased turnover was made possible mainly because of entrustment of Asare works in the flood affected areas of northern Karnataka at an estimated cost of Rs.150.31 Crores. The Company has achieved a net profit of Rs.16.61 Crores after providing for Income Tax of Rs.13.83 Crores, provision for Bad Debts of Rs.4.40 Crores and provision for ex-gratia of Rs.1.59 Crores to the employees.

The Company also made provisions for payment of Rs.1.22 Crores as dividend to Government of Karnataka at 10% on the Share Capital for the second year in succession in the history of the Company.

The Company's Net worth has increased by 22.83% over that of the past year from Rs.66.48 Crores to Rs.81.66 Crores during the year. This is mainly because of the consistent progress achieved in terms of turnover and net profit from 2008-09 onwards.

At the end of 31-03-2011, the value of work pending adjustment stood at Rs. 983.12 Crores against Rs.728.08 Crores in the previous year. Final bills amounting to Rs.346.05 Crores have been adjusted during the year as against Rs.226.10 Crores adjusted in the previous year. The resultant debtors arose due to final bill adjusted is to the extent of Rs.3.04 Crores as against Rs.2.82 Crores in the previous year. The income recognized from final bills adjustment during the year is Rs.107.90 lakhs as against Rs.76.19 lakhs in the previous year.

## ಆರ್ಥಿಕ ಪ್ರಗತಿ / FINANCIAL RESULTS

ಪ್ರಸಕ್ತ ವರ್ಷದ ಕಂಪನಿಯ ಆರ್ಥಿಕ ಪ್ರಗತಿ ಈ ಕೆಳಕಂಡಂತಿದೆ.

The financial results of the Company during the year are as follows:

(ರೂ. ಲಕ್ಷಗಳಲ್ಲಿ/Rs. in lakhs)

| ವಿವರಗಳು / Particulars | 2010-11 | 2009-10 | 2008-09 |
|---|---|---|---|
| ವಹಿವಾಟು<br>Value of work done | 59951.10 | 38020.76 | 34486.20 |
| ಇತರೆ ಆದಾಯ<br>Other Income | 2380.78 | 2226.81 | 1268.98 |
| ಒಟ್ಟು ಆದಾಯ<br>Total Income | 62331.88 | 40247.57 | 35755.18 |
| ನೇರ ಕಾಮಗಾರಿ ವೆಚ್ಚ<br>Direct Works Expenditure | 55455.92 | 33994.75 | 29995.05 |
| ಇತರೆ ವೆಚ್ಚ<br>Other Expenses | 4179.64 | 3986.26 | 3429.47 |
| ಸವಕಳಿಗೆ ಮುನ್ನ ವರ್ಷದ ಲಾಭ/(ನಷ್ಟ)<br>Profit/(Loss) for the year before Depreciation | 2696.32 | 2266.56 | 2330.66 |
| ಸವಕಳಿ<br>Depreciation | 65.00 | 38.07 | 44.04 |
| ಸವಕಳಿ ನಂತರ ವರ್ಷದ ಲಾಭ/(ನಷ್ಟ)<br>Profit /(Loss) for the year after depreciation | 2631.32 | 2228.48 | 2286.62 |
| ಅವಧಿ ಪೂರ್ವ ಹೊಂದಾಣಿಕೆಗಳು (ಸಿಆರ್)<br>Prior period adjustments (Cr) | 24.78 | 83.52 | 536.35 |
| ತೆರಿಗೆ ನಿರ್ಧರಣೆಯ ಮೊದಲಿನ ಲಾಭ/(ನಷ್ಟ)<br>Profit /(Loss) before taxation | 2656.10 | 2312.00 | 2822.97 |
| ಆದಾಯ ತೆರಿಗೆ<br>Income Tax | 1382.95 | 803.71 | 704.65 |
| ತೆರಿಗೆ ನಂತರದ ಆದರೆ ಮುಂದೂಡಲಾದ ತೆರಿಗೆಗೆ ಮೊದಲಿನ ಲಾಭ/ (ನಷ್ಟ)<br>Profit/(Loss) after Tax before Deferred Tax | 1273.15 | 1508.29 | 2122.97 |
| ಸವಲತ್ತುಗಳ ಮೇಲಿನ ತೆರಿಗೆ (ಡಿಆರ್)<br>Fringe Benefit Tax (Dr) | 0 | 0.00 | 7.40 |
| ಮುಂದೂಡಲಾದ ಮತ್ತು ಇತರೆ ತೆರಿಗೆಗಳ ಜಮೆ (ನಿವ್ವಳ) (ಸಿಆರ್)<br>Deferred and other taxes Credit (Net)(Cr) | 388.24 | 169.75 | 0.37 |
| ತೆರಿಗೆ ನಿರ್ಧರಣೆ ನಂತರದ ಲಾಭ/(ನಷ್ಟ)<br>Profit/(Loss) After taxation | 1661.39 | 1678.04 | 2110.55 |

### ಲಾಭಾಂಶ

ಕಂಪನಿಯು ಗಳಿಸಿದ ಲಾಭ ಮತ್ತು ಮುಂದಿನ ದಿನಗಳಿಗೆ ಬೇಕಾಗುವ ಹಣಕಾಸಿನ ಅಗತ್ಯತೆಗಳನ್ನು ಪರಿಗಣಿಸಿ, ಆಡಳಿತ ಮಂಡಳಿಯು ಪ್ರತಿ ರೂ.1000/– ಷೇರಿಗೆ ರೂ.100/–ಗಳನ್ನು ಲಾಭಾಂಶವಾಗಿ (ಶೇಕಡ 10) ನೀಡಲು ಶಿಫಾರಸ್ಸು ಮಾಡಿರುತ್ತದೆ. ಅದರಂತೆ, ಕಂಪನಿಯು ರೂ.1.22 ಕೋಟಿಗಳನ್ನು ತನ್ನ ಲೆಕ್ಕಪತ್ರದಲ್ಲಿ ಸರ್ಕಾರಕ್ಕೆ ನೀಡಬೇಕಾದ ಲಾಭಾಂಶವೆಂದು ಒದಗಣೆ ಮಾಡಿರುತ್ತದೆ ಹಾಗೂ ಇದು ತನ್ನ ಇತಿಹಾಸದಲ್ಲಿ ಸತತವಾಗಿ 2ನೇ ವರ್ಷ ನೀಡುತ್ತಿರುವ ಲಾಭಾಂಶವಾಗಿದೆ.

### DIVIDEND

Considering the profits earned and the funds needed in the foreseeable future, your Board has recommended dividend of Rs.100/-per Equity Share of Rs.1000/- each (10%). Accordingly the Company has made provision for payment of Rs.1.22 Crores as dividend to the Government of Karnataka for the second year in succession in the history of the Company.

### ಕಾರ್ಯನಿರ್ವಹಣೆ

ಕಂಪನಿಯ ಆಡಳಿತ ಮಂಡಳಿಯು ಸರ್ಕಾರದ ಹಲವಾರು ಇಲಾಖೆಗಳನ್ನು ನಿರಂತರವಾಗಿ ಸಂಪರ್ಕಿಸಿ ಕಂಪನಿಯ ವಹಿವಾಟನ್ನು ಹೆಚ್ಚಿಸಲು ಅನುಕೂಲವಾಗಲು ಕಾಮಗಾರಿಗಳನ್ನು ವಹಿಸಲು ಕೋರಿಕೊಳ್ಳಲಾಗಿರುತ್ತದೆ. ನಿಮ್ಮ ಕಂಪನಿಯು 2006-07ನೇ ಹಣಕಾಸಿನ ವರ್ಷದಲ್ಲಿ ಕನ್ಸಲ್‌ಟೆನ್ಸಿ ವಿಭಾಗವನ್ನು ಪ್ರಾರಂಭಿಸಿದ್ದು, ಇದರ ಮೂಲಕ ಟೆಕ್ನಿಕಲ್ ಕನ್ಸಲ್‌ಟೆನ್ಸಿ ಸೇವೆಗಳನ್ನು ಅಗತ್ಯವಿರುವ ಇಲಾಖೆಗಳಿಗೆ ಒದಗಿಸುತ್ತಾ ಬಂದಿದೆ. ಹಿಂದಿನ ಸಾಲಿನಲ್ಲಿ ಕಂಪನಿಯು ರೂ.101.95 ಲಕ್ಷಗಳಿಗೆ ಬದಲಾಗಿ ಪ್ರಸಕ್ತ ಸಾಲಿನಲ್ಲಿ ರೂ.246.29 ಲಕ್ಷಗಳ ಕನ್ಸಲ್‌ಟೆನ್ಸಿ ಮೊತ್ತವನ್ನು ಪಡೆದಿರುತ್ತದೆ. ಕಂಪನಿಯು ಕನ್ಸಲ್‌ಟೆನ್ಸಿ ಸೇವೆಯ ಪ್ರಾರಂಭದಿಂದ ಇದುವರೆಗೂ ರೂ.571.92 ಲಕ್ಷಗಳಷ್ಟು ಗಳಿಸಿರುತ್ತದೆ.

### ಕಂಪನಿಯ ಪುನಃಶ್ಚೇತನ

ಕಂಪನಿಯು ಹಿಂದಿನ 3 ವರ್ಷಗಳಲ್ಲಿ ತನ್ನ ಆದಾಯ ಮತ್ತು ಲಾಭದ ಮಟ್ಟ ಹೆಚ್ಚಿಸಿಕೊಂಡು ಪುನಃಶ್ಚೇತನಗೊಂಡಿದೆ. ವಿವರಗಳು ಈ ಕೆಳಕಂಡಂತಿರುತ್ತದೆ.

### PERFORMANCE

Your Company's Management has been infusing every effort to increase the business of the Company by approaching different Government Departments to get works entrusted. Your Company had started consultancy division during the financial year 2006-07. Through this division the Company is extending technical consultancy services to the needy institutions. During the year the Company has received Rs.246.29 lakhs from Consultancy Services as against Rs.101.95 lakhs in the previous year. The Company has earned Rs.571.92 lakhs as Consultancy charges since beginning of the services.

### TURNAROUND OF THE COMPANY

Your Company has made turnaround in the last three years by increasing its revenue generations and profit margins which is shown in below table:

(ರೂ. ಕೋಟಿಗಳಲ್ಲಿ / Rs.in Crores)

| ವಿವರಗಳು/Particulars | 31.3.2011 | 31.3.2010 | 31.3.2009 |
|---|---|---|---|
| ಒಟ್ಟು ಆದಾಯ<br>Total Revenues | 623.32 | 402.46 | 357.55 |
| ನೇರ ಕಾಮಗಾರಿ ವೆಚ್ಚ<br>Direct Work Expn. | 554.56 | 339.95 | 299.95 |
| ಕಾರ್ಯಾಚರಣೆಯ ಲಾಭ<br>Operating Profit | 68.76 | 62.51 | 57.60 |
| ಶೇಕಡವಾರು ಕಾರ್ಯಾಚರಣೆ ಲಾಭಾಂಶ / % of OP | 11.46% | 15.53% | 16.11% |

ಕಾರ್ಯಾಚರಣೆ ಲಾಭಾಂಶ ಸದರಿ ವರ್ಷದಲ್ಲಿ ಶೇಕಡ 11.46 ರಷ್ಟಿದ್ದು, ಇದು ಕಳೆದ ವರ್ಷದಲ್ಲಿ ಶೇಕಡ 15.53 ಇರುತ್ತದೆ. ಶೇಕಡವಾರು ಲಭಾಂಶದ ಇಳಿಕೆಗೆ ಮುಖ್ಯ ಕಾರಣವೆಂದರೆ ರೂ.120.00 ಕೋಟಿಯಷ್ಟು ಆಸರೆ ಮನೆಗಳ ನಿರ್ಮಾಣವನ್ನು ಯಾವುದೇ ಲಾಭಾಂಶವಿಲ್ಲದೆ ನಿರ್ಮಿಸಿರುವುದು. ಆಸರೆ ಮನೆಗಳ ವಹಿವಾಟು ಕಳೆದರೆ, ಕಾರ್ಯಾಚರಣೆ ಲಾಭಾಂಶ ಶೇಕಡ 14.33 ರಷ್ಟಾಗುತ್ತದೆ. ಆಸರೆ ಕಾಮಗಾರಿ ವಹಿವಾಟು ಕಳೆದ ಮೇಲೆ ಲಾಭಾಂಶವನ್ನು ಕಳೆದ ವರ್ಷಕ್ಕೆ ಹೋಲಿಸಿದರೆ ಇಳಿಮುಖ ಕೇವಲ ಶೇಕಡ 1.20 ರಷ್ಟಾಗುತ್ತದೆ ಹಾಗೂ ಇದು ಕೆಆರ್ಐಡಿಎಲ್ ಚಾರ್ಜ್‌ನ್ನು 2009-10 ನೇ ಸಾಲಿನಲ್ಲಿ ಶೇಕಡ 10 ರಿಂದ 5 ಕ್ಕೆ ಇಳಿಸಿದರೂ ಸಹ ಅಷ್ಟಾಗಿ ನಿಗಮದ ಶೇಕಡವಾರು ಲಾಭಾಂಶದ ಮೇಲೆ ಪರಿಣಾಮ ಬೀರಿಲ್ಲ.

### ಹಣಕಾಸು ಸ್ಥಿತಿ

ಕಂಪನಿಯ ಆರ್ಥಿಕ ಸ್ಥಿತಿಯನ್ನು ಈ ಮುಂದಿನ ಅಂಕಿಅಂಶಗಳು ವ್ಯಕ್ತಪಡಿಸುತ್ತದೆ:

The percentage of operating profit works out to 11.46% during the year as against 15.53% in the previous year. The decline is mainly because of carrying out Asare works to the extent of Rs.120.00 Crore which has no savings. Excluding Asare works, percentage of operating profit works out to 14.33%. The decline in operating profit margin excluding Asare works is only 1.20% from previous year in spite of reduction of KRIDL charges from 10% to 5% during 2010-11.

### FINANCIAL POSITION

The following data reflects the financial position of your Company:

(ಲಕ್ಷ ರೂ.ಗಳಲ್ಲಿ/Rs. in lakhs)

| ವಿವರಗಳು / Particulars | 2010-11 | 2009-10 | 2008-09 |
|---|---|---|---|
| ಸಂದಾಯ ಮಾಡಿದ ಈಕ್ವಿಟಿ ಬಂಡವಾಳ<br>Paid up Equity Capital | 1225.00 | 1225.00 | 1225.00 |
| ಮೀಸಲು ಮತ್ತು ನಿಧಿಗಳು<br>Reserves and Surplus | 6941.02 | 5422.94 | 3299.97 |

| ವಿವರಗಳು / Particulars | 2010-11 | 2009-10 | 2008-09 |
|---|---|---|---|
| ಅನಿಶ್ಚಿತ ಸಾಲ: ಹುಡ್ಕೊ<br>Unsecured Loans-HUDCO | 5895.06 | 7215.51 | 8467.45 |
| ಮುಂದೂಡಲಾದ ತೆರಿಗೆ ಹೊಣೆಗಾರಿಕೆ<br>Deferred Tax Liability | 0.00 | 0.00 | 32.85 |
| ಪ್ರಸಕ್ತ ಹೊಣೆಗಾರಿಕೆಗಳು ಮತ್ತು ಉಪಬಂಧಗಳು<br>Current Liabilities & Provisions | 156172.82 | 113161.88 | 85888.55 |
| ಒಟ್ಟು<br>Total | 170233.90 | 127025.33 | 98913.82 |
| ನಿವ್ವಳ ಸ್ಥಿರ ಆಸ್ತಿಗಳು<br>Net Fixed Assets | 3602.26 | 3464.22 | 2876.49 |
| ಪ್ರಚಲಿತ ಆಸ್ತಿಗಳು<br>Current Assets | 54270.63 | 36673.24 | 23657.75 |
| ಸಾಲ ಮತ್ತು ಮುಂಗಡಗಳು<br>Loans and Advances | 14049.29 | 14079.73 | 14979.19 |
| ಕಾಮಗಾರಿಗಳ ಮೌಲ್ಯ,(ಹೊಂದಾಣಿಕೆಗೆ ಮುನ್ನ)<br>Value of Work, pending adjustment | 98311.72 | 72808.14 | 57400.39 |
| ಒಟ್ಟು<br>Total | 170233.90 | 127025.33 | 98913.82 |
| ನಿವ್ವಳ ಆಸ್ತಿ<br>Net Worth | 8166.02 | 6389.90 | 4524.97 |

### ಷೇರು ಬಂಡವಾಳ

ಕಂಪನಿಯ ಅಧಿಕೃತ ಬಂಡವಾಳ 2011ರ ಮಾರ್ಚ್ 31ರ ವೇಳೆಗೆ 1500 ಲಕ್ಷ ರೂ.ಗಳು ಮತ್ತು ಸಂದಾಯ ಮಾಡಿದ ಬಂಡವಾಳ 1225 ಲಕ್ಷ ರೂ.ಗಳು.

### ಸ್ಥಿರ ಠೇವಣಿಗಳು

ಕಂಪನಿಗಳ ಕಾಯ್ದೆ 1956ರ ಅಧಿನಿಯಮ 58ಎ ಅಡಿ ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿ ಅಂಗೀಕರಿಸಿಲ್ಲ.

### ಗುಣಮಟ್ಟ

ಕಂಪನಿಯು ಗುಣಮಟ್ಟದ ಕಾಮಗಾರಿಗಳನ್ನು ನಿರ್ವಹಿಸುವತ್ತ ಹೆಚ್ಚಿನ ಗಮನ ನೀಡುವುದನ್ನು ಮುಂದುವರೆಸಿದೆ ಹಾಗೂ ಕೆಲಸಗಳನ್ನು ಸಾಮಾನ್ಯವಾಗಿ ವೇಳಾಪಟ್ಟಿ ಮಿತಿಯೊಳಗೆ ನಿರ್ವಹಿಸಲಾಗುತ್ತದೆ. ಸ್ಥಳೀಯ ಇಂಜಿನಿಯರಿಂಗ್ ಕಾಲೇಜುಗಳಿಂದ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪ್ರಮಾಣೀಕರಿಸಲು ವಲಯವಾರು ಟೆಂಡರ್ ಮುಖಾಂತರ 3ನೇ ವ್ಯಕ್ತಿಗಳಿಂದ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಲೆಕ್ಕಪರಿಶೋಧನೆಯನ್ನು ನಿಯತಕಾಲಿಕವಾಗಿ ಆಡಳಿತ ಮಂಡಳಿಗೆ ವರದಿ ಮಾಡಲು ನೇಮಿಸಿದೆ. ಹಾಗೂ ಕಂಪನಿಯು ಕೆಲವೊಂದು ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡಲು ಆಯ್ದ ಕೆಲವು ಕಾಮಗಾರಿಗಳನ್ನು ಪರಿಶೀಲಿಸಲು ಪ್ರಧಾನ ವ್ಯವಸ್ಥಾಪಕರು, ಜಂಟಿ ನಿರ್ದೇಶಕರು, ಉಪ ನಿರ್ದೇಶಕರುಗಳಿಗೆ ವಹಿಸಲಾಗಿದೆ.

### SHARE CAPITAL

The Authorized Share Capital of the Company as at the close of 31st March 2011 is Rs.1500 lakhs and the paid Up Capital is Rs.1225 lakhs.

### FIXED DEPOSITS

The Company has not accepted any deposit from the public within the meaning of Section 58A of the Companies Act, 1956.

### QUALITY

Your Company continues to give emphasis on executing quality work and the works are executed generally without time and Cost overrun. Quality and reliability of services are identified as the key thrust area. Local Engineering colleges are assigned for quality certification of the works. Third parties have been appointed zone wise for quality and quantity Audit of works periodically and report to the Management. The management also selects the works randomly and gets verified through Deputy Directors, Joint Directors and General Managers. Thus the Company is making all efforts to maintain the quality of its works.

### ಭಾರತದ ನಿಯಂತ್ರಕರು ಮತ್ತು ಆಡಿಟರ್ ಜನರಲ್‌ರವರು ಕೈಗೊಂಡ ಕಾರ್ಯನಿರ್ವಹಣೆ ಲೆಕ್ಕಪರಿಶೋಧನೆ

ಭಾರತದ ನಿಯಂತ್ರಕರು ಮತ್ತು ಆಡಿಟರ್ ಜನರಲ್‌ರವರು ನಿಮ್ಮ ಕಂಪನಿಯನ್ನು **"ನಿರ್ಮಾಣ ಚಟುವಟಿಕೆ"** ಅಡಿ 2006–07 ರಿಂದ 2010–11ನೇ ಸಾಲಿನವರೆಗೆ ಕಾರ್ಯನಿರ್ವಹಣೆ ಲೆಕ್ಕಪರಿಶೋಧನೆ ಮಾಡಲು ಆಯ್ಕೆ ಮಾಡಿಕೊಂಡಿದ್ದು, ಅವರು ಕಂಪನಿಯ 15 ಉಪ ವಿಭಾಗಗಳನ್ನು ಮತ್ತು ಕೇಂದ್ರ ಕಛೇರಿಯನ್ನು ಬೆಳಗಾಂ, ಚಿತ್ರದುರ್ಗ, ಬೆಂಗಳೂರು, ಬಿ.ಬಿ.ಎಂ.ಪಿ ವಲಯಗಳಲ್ಲಿ ಆಯ್ಕೆ ಮಾಡಿಕೊಂಡಿರುತ್ತಾರೆ. ಈ 15 ಉಪ ವಿಭಾಗಗಳಲ್ಲಿ 377 ಕಾಮಗಾರಿಗಳ ಲೆಕ್ಕಪರಿಶೋಧನೆ ಮಾಡಿರುತ್ತಾರೆ ಹಾಗೂ ತಮ್ಮ ಕರಡು ಲೆಕ್ಕಪರಿಶೋಧನಾ ವರದಿಯನ್ನು ಆಗಸ್ಟ್ 2011ರಲ್ಲಿ ಸಲ್ಲಿಸಿರುತ್ತಾರೆ. ಕಂಪನಿಯು ಅವರ ವರದಿಯಲ್ಲಿರುವ ಆಕ್ಷೇಪಣೆಗಳಿಗೆ ಉತ್ತರವನ್ನು ಸರ್ಕಾರದ ಮೂಲಕ ಸಲ್ಲಿಸಿರುತ್ತದೆ.

### ಕಂಪನಿಯು ಕೈಗೊಂಡ ಪ್ರಮುಖ ಯೋಜನೆಗಳು

ಪ್ರಸಕ್ತ ವರ್ಷದಲ್ಲಿ ಕಂಪನಿಗೆ ಸರ್ಕಾರದ ಇಲಾಖೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಂದ ವಹಿಸಿದ ಕಾಮಗಾರಿಯ ಯೋಜನೆಗಳು ಕೆಳಗಿನಂತಿವೆ.

**ಅ) ಆಸರೆ ಮನೆಗಳು :–** ಸರ್ಕಾರವು ಪ್ರವಾಹ ಪೀಡಿತ ಪ್ರದೇಶಗಳಲ್ಲಿ 11049 ಆಸರೆ ಮನೆಗಳನ್ನು 10 ಜಿಲ್ಲೆಗಳನ್ನೊಳಗೊಂಡಂತೆ 97 ಸ್ಥಳಗಳಲ್ಲಿ ರೂ.150.31 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ವಹಿಸಲಾಗಿತ್ತು. ಸ್ಥಳೀಯ ಪ್ರಾಧಿಕಾರವು ನಿವೇಶನ ಒದಗಿಸಿದ ಆಧಾರದ ಮೇಲೆ ಕಂಪನಿಯು 88 ಸ್ಥಳಗಳಲ್ಲಿ 9844 ಮನೆಗಳನ್ನು ನಿರ್ಮಿಸುವ ಕಾರ್ಯವನ್ನು ಕೈಗೆತ್ತಿ ಕೊಂಡಿದೆ. ಸರ್ಕಾರವು ರೂ.140.00 ಕೋಟಿಗಳನ್ನು ಕಂಪನಿಗೆ ಬಿಡುಗಡೆ ಮಾಡಿದ್ದು, ಕಂಪನಿಯು ಇಲ್ಲಿಯವರೆಗೆ 8577 ಮನೆಗಳನ್ನು 76 ಸ್ಥಳಗಳಲ್ಲಿ ನಿರ್ಮಾಣ ಮಾಡಿದ್ದು, ಉಳಿದ ಮನೆಗಳ ನಿರ್ಮಾಣ ಕಾರ್ಯವು ವಿವಿಧ ಹಂತದಲ್ಲಿದೆ. ಕಂಪನಿಯು ಸುಮಾರು ರೂ.120.00 ಕೋಟಿಗಳನ್ನು ಪ್ರಸ್ತುತ ವರ್ಷದಲ್ಲಿ ಖರ್ಚು ಮಾಡಿರುತ್ತದೆ. ಕಂಪನಿಯು ಈ ಕಾಮಗಾರಿಗಳನ್ನು ಯಾವುದೇ ಲಾಭಾಂಶವಿಲ್ಲದೆ ನಿರ್ಮಾಣ ಮಾಡುತ್ತಿದ್ದು, ಈ ಮೂಲಕ "ಸಾಮುದಾಯಿಕ ಸಾಮಾಜಿಕ ಬದ್ಧತೆಯನ್ನು" ರಾಜ್ಯದ ನೆರೆ ಪೀಡಿತ ಜನರಿಗೆ ಮಾಡಿದಂತಾಗುತ್ತದೆ.

**ಆ) ಸುವರ್ಣ ಗ್ರಾಮ ಯೋಜನೆ :–** ಸರ್ಕಾರವು ಸುವರ್ಣ ಗ್ರಾಮ ಯೋಜನೆ ಹಂತ–1 ರಿಂದಲೂ ಕಾಮಗಾರಿಗಳನ್ನು ಕಂಪನಿಗೆ ವಹಿಸಿಕೊಡುತ್ತಿದೆ. ಈಗ ಪ್ರಸ್ತುತ ಹಂತ–4 ಪ್ರಾರಂಭವಾಗಬೇಕಾಗಿದೆ. ಕಂಪನಿಯು ರೂ.167.41 ಕೋಟಿಗಳನ್ನು ಪ್ರಸ್ತುತ ವರ್ಷದಲ್ಲಿ ಪಡೆದಿರುತ್ತದೆ ಹಾಗೂ 2009–10ನೇ ಸಾಲಿನಲ್ಲಿ ವಿವಿಧ ಹಂತಗಳ ಕಾಮಗಾರಿಗಳಿಗೆ ರೂ.58.98 ಕೋಟಿ ಪಡೆದಿತ್ತು. ಕಂಪನಿಯು ಪ್ರಸ್ತುತ ವರ್ಷದಲ್ಲಿ ರೂ.161.64 ಕೋಟಿಗಳನ್ನು ವ್ಯಯಿಸಿದ್ದು, ಕಳೆದ ವರ್ಷದಲ್ಲಿ ರೂ.32.43 ಕೋಟಿಗಳಷ್ಟು ವ್ಯಯಿಸಲಾಗಿರುತ್ತದೆ.

**ಇ) ಸಮಾಜ ಕಲ್ಯಾಣ ಇಲಾಖೆಯ ಕಾಮಗಾರಿಗಳು :–** ಸಮಾಜ ಕಲ್ಯಾಣ ಇಲಾಖೆಯು ರಾಜ್ಯದ ವಿವಿಧ ಭಾಗಗಳಲ್ಲಿ ವಿದ್ಯಾರ್ಥಿ ನಿಲಯಗಳನ್ನು ಕಟ್ಟಲು ಕಂಪನಿಗೆ ವಹಿಸಿರುತ್ತದೆ. 2010–11ನೇ ಸಾಲಿನಲ್ಲಿ ಸಮಾಜ ಕಲ್ಯಾಣ

### PERFORMANCE AUDIT BY COMPTROLLER AND AUDITOR GENERAL OF INDIA

CAG of India have selected your Company to conduct performance Audit on **"Construction activity"** of the company from 2006-07 to 2010-11 during the year. They have selected 15 sub-divisions including Head offices located in Belgaum, Chitradurga, Bangalore and BBMP Zones of the Company. In these 15 sub-divisions they have selected 377 works for their Audit. They have completed their Audit and given their draft Audit report during August 2011. Company has given the replies to the observations to the CAG through Government.

### IMPORTANT SCHEMES UNDERTAKEN BY THE COMPANY

The Company has executed works mainly under the following schemes entrusted by the Government Departments and other local bodies during the year.

**a) Asare Houses:** The Government has entrusted the construction of 11,049 houses in 10 district located in 97 places for the flood affected people in northern Karnataka at an estimated cost of Rs.150.31 Crore. Out of this, Company has taken up construction of 9844 houses in 88 places for which sites were given by the local authority. Government has released Rs.140.00 Crores for construction of these houses. Company has completed 8577 houses in 76 places and the remaining houses are in different stage of completion. The Company has spent about Rs.120.00 Crore during the year under the Scheme. These works have been entrusted to the Company at zero profit margins and the Company is executing these works to discharge its Corporate Social Responsibility to the flood affected people of the State.

**b) Suvarna Grama Yojane:** The Government has been entrusting works to the Company under this scheme from phase I itself. At present phase IV is yet to be started. The Company has received Rs.167.41 Crores during the year as against Rs.58.98 Crore received during 2009-10 for different phases. The Company has incurred an expenditure of Rs.161.64 crores during the year as against Rs.32.43 Crores incurred during the previous year.

**c) Social Welfare Department Works :** Social welfare Department is entrusting the construction of Hostels at various places in the State. During 2010-11, the

ಇಲಾಖೆಯು 67 ಸ್ಥಳಗಳಲ್ಲಿ ವಿದ್ಯಾರ್ಥಿ ನಿಲಯಗಳನ್ನು ರೂ.55.81 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ವಹಿಸಲಾಗಿದೆ. ಕಳೆದ ವರ್ಷದಲ್ಲಿ 60 ಕಾಮಗಾರಿಗಳನ್ನು ರೂ.51.02 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ವಹಿಸಲಾಗಿತ್ತು. ಕಂಪನಿಯು ಪ್ರಸ್ತುತ ವರ್ಷದಲ್ಲಿ ರೂ.9.84 ಕೋಟಿಗಳನ್ನು ಖರ್ಚು ಮಾಡಲಾಗಿದ್ದು, ಕಳೆದ ವರ್ಷ ರೂ.27.73 ಕೋಟಿಗಳನ್ನು ಖರ್ಚು ಮಾಡಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯು ದುರಸ್ಥಿ ಕಾಮಗಾರಿಗಳು ಹಾಗೂ ಹೆಚ್ಚುವರಿ ನಿರ್ಮಾಣ ಕಾರ್ಯಗಳನ್ನು ಸಹ ಕಂಪನಿಗೆ ವಹಿಸುತ್ತಿದ್ದು, ಪ್ರಸ್ತುತ ವರ್ಷದಲ್ಲಿ ರೂ.25.49 ಕೋಟಿಗಳಷ್ಟು ಕಾಮಗಾರಿಗಳನ್ನು ವಹಿಸಿದೆ.

**ಈ) ಗ್ರಾಮ ಪಂಚಾಯಿತಿ ಕಟ್ಟಡಗಳು :–** ಸರ್ಕಾರವು ನಬಾರ್ಡ್ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ ಗ್ರಾಮ ಪಂಚಾಯಿತಿ ಕಟ್ಟಡಗಳ ನಿರ್ಮಾಣವನ್ನು ಪ್ರಾರಂಭಿಸಿರುತ್ತದೆ. ವಿವಿಧ ಜಿಲ್ಲಾ ಪಂಚಾಯಿತಿಗಳು 455 ಗ್ರಾಮ ಪಂಚಾಯಿತಿ ಕಟ್ಟಡಗಳನ್ನು 152 ತಾಲ್ಲೂಕುಗಳಲ್ಲಿ ಮೊದಲ 3 ಹಂತದಲ್ಲಿ ಕಂಪನಿಗೆ ವಹಿಸಿರುತ್ತದೆ. ಈ ಕಾಮಗಾರಿಗಳ ಅಂದಾಜು ವೆಚ್ಚ ರೂ.75.57 ಕೋಟಿಗಳಿದ್ದು, ಜಿಲ್ಲಾ ಪಂಚಾಯಿತಿಗಳು ರೂ.46.18 ಕೋಟಿಗಳನ್ನು ಕಂಪನಿಗೆ ಬಿಡುಗಡೆ ಮಾಡಿರುತ್ತದೆ. ಕಂಪನಿಯು 31.03.2011ಕ್ಕೆ ರೂ.44.59 ಕೋಟಿ ಆರ್ಥಿಕ ಪ್ರಗತಿಯನ್ನು ಸಾಧಿಸಿದ್ದು, 172 ಕಟ್ಟಡಗಳ ನಿರ್ಮಾಣವನ್ನು ಪೂರ್ಣಗೊಳಿಸಿರುತ್ತದೆ ಹಾಗೂ ಉಳಿದ ಕಟ್ಟಡಗಳ ನಿರ್ಮಾಣದ ಕಾರ್ಯವು ವಿವಿಧ ಹಂತದಲ್ಲಿದೆ.

**ಉ) ಬಿಬಿಎಂಪಿ ಕಾಮಗಾರಿಗಳು :–** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಕಾಮಗಾರಿಗಳಾದ ರಸ್ತೆ ಅಗಲೀಕರಣ, ಡಾಂಬರೀಕರಣ, ಒಳಚರಂಡಿ ನಿರ್ಮಾಣ, ಕಡಿಮೆ ವೆಚ್ಚದ ಮನೆಗಳ ನಿರ್ಮಾಣ, ಸಮುದಾಯ ಭವನಗಳ ನಿರ್ಮಾಣ, ಶೌಚಾಲಯ ನಿರ್ಮಾಣ, ಬಸ್ ನಿಲ್ದಾಣ ನಿರ್ಮಾಣ ಇತ್ಯಾದಿಗಳನ್ನು ಕಂಪನಿಗೆ ವಹಿಸಲಾಗಿರುತ್ತದೆ. ಪ್ರಸ್ತುತ ವರ್ಷದಲ್ಲಿ ಬಿಬಿಎಂಪಿಯು ಸುಮಾರು ರೂ.250.00 ಕೋಟಿಗಳ ಕಾಮಗಾರಿಯನ್ನು ಕಂಪನಿಗೆ ವಹಿಸಿದ್ದು, ಕಂಪನಿಯು ರೂ.82.00 ಕೋಟಿಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತದೆ.

**ಊ) ಇತರೆ ಕಾಮಗಾರಿಗಳು :–** ಕಂಪನಿಯು ಪ್ರವಾಸೋದ್ಯಮ ಇಲಾಖೆ, ಮೀನುಗಾರಿಕೆ ಇಲಾಖೆ, ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಇತರೆ ಸರ್ಕಾರ ಸಂಸ್ಥೆಗಳಿಂದಲೂ ಮತ್ತು ಸ್ಥಳೀಯ ಸಂಸ್ಥೆಗಳಿಂದಲೂ ಕೆಲಸಗಳನ್ನು ಪಡೆಯುತ್ತಿದೆ. ಶಾಸಕರು ಮತ್ತು ಸಂಸದರೂ ಸಹ ತಮ್ಮ ಅಭಿವೃದ್ಧಿ ನಿಧಿಯ ಕೆಲಸಗಳನ್ನು ಕಂಪನಿಗೆ ವಹಿಸಿಕೊಡುತ್ತಿದ್ದಾರೆ.

## ಮುಂದಿನ ದೃಷ್ಟಿಕೋನ

ನಿಮ್ಮ ನಿರ್ದೇಶಕರು ಕಂಪನಿಯು ಮುಂಬರುವ ವರ್ಷಗಳಲ್ಲಿ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಗುರಿ, ಧ್ಯೇಯಗಳನ್ನು ರೂಪಿಸಿ, ಕಂಪನಿಯ ಒಟ್ಟಾರೆ ಅಭಿವೃದ್ಧಿ ಮತ್ತು ಲಾಭಾಂಶ ಹೆಚ್ಚಿಸಲು ಸೂಕ್ತ ಕ್ರಮ ಕೈಗೊಂಡಿದ್ದಾರೆ. ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಒತ್ತು ನೀಡುತ್ತಿದೆ. ನಮ್ಮ ಕಂಪನಿಯ ಈ ಕೆಲಸಗಳಲ್ಲಿ ಮುಂಚೂಣಿಯಲ್ಲಿರುವುದರಿಂದ ಪ್ರಮುಖ ಪಾತ್ರವಹಿಸಲು

Department has entrusted 67 number of Hostels at an estimated cost of Rs.55.81 Crores as against 60 number of works entrusted at an estimated cost of Rs.51.02 Crores in the previous year. The Company has incurred an expenditure of Rs.9.84 Crore during the year as against Rs.27.73 Crore incurred in the previous year.

The Department has also entrusted additional constructions and repairs to the existing buildings at an estimated cost of Rs.25.49 crores during the year.

**d) Grama Panchayath Buildings :** The Government has taken up the construction of Buildings to the Grama Panchayathies with the assistance of NABARD. The Zilla Panchayaths of various districts have entrusted the construction of 455 number of Grama Panchayath Buildings located in 152 Taluks under three phases. The estimated cost of these buildings is Rs.75.57 Crores and ZP'S have released Rs.46.18 Crore to the Company so far. The Company has achieved financial progress of Rs.44.59 Crores as on 31.3.2011 and 172 Buildings have been completed and remaining are in different stage of completion.

**e) BBMP Works :** Bruhat Bangalore Mahanagara Palike has entrusted various works such as widening and asphalting of Roads, construction of Drainages, construction of low cost houses, Samudaya Bhavanas, Toilets, Bus Terminals etc. During the year BBMP has entrusted works to the extent of Rs. 250.00 Crores. Company has completed works to the extent of Rs.82.00 Crores during the year.

**Other works :** The Company is also getting works from Tourism, Fisheries, Forest, Horticulture Departments and other Government agencies and local bodies. MLA'S and MP'S are also entrusting works from their developments funds.

## FUTURE OUTLOOK

Your Directors are confident that your Company with new face and all the motivation amongst the employees, will be in a position to meet the challenges of the future through well-defined objectives and strategies to improve the overall performance and profitability in the coming years. The Government has been laying immense thrust on the infrastructure developments in the rural and semi urban areas. KRIDL, being lead institution in the development of infrastructure in rural areas, will have

ಸನ್ನದ್ಧವಾಗಿದೆ. ಸರ್ಕಾರವು ನಮ್ಮ ನಿಗಮಕ್ಕೆ ಪಾರದರ್ಶಕ ಕಾಯ್ದೆ ಸೆಕ್ಷನ್ 4(ಜಿ) ಕೆಳಗೆ ರೂ.1.00 ಕೋಟಿಯೊಳಗಿನ ಕಾಮಗಾರಿಗಳಿಗೆ ವಿನಾಯಿತಿ ನೀಡಿದೆ. ಈ ವಿನಾಯಿತಿಯು ದಿನಾಂಕ 31.3.2012 ಕ್ಕೆ ಕೊನೆಗೊಳ್ಳುತ್ತದೆ. ಈ ರಿಯಾಯಿತಿಯನ್ನು ರೂ.2.00 ಕೋಟಿಗಳಿಗೆ ಏರಿಸಿ ಮುಂದಿನ ಮೂರು ವರ್ಷಕ್ಕೆ ವಿಸ್ತರಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುವುದು.

ಸರ್ಕಾರವು ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯವನ್ನು ಒದಗಿಸುವ ಸಲುವಾಗಿ ಸಾಕಷ್ಟು ಅನುದಾನವನ್ನು ಹೂಡಿದೆ. ನಮ್ಮ ಕಂಪನಿಯು ಅಂತಹ ಕಾಮಗಾರಿಗಳನ್ನು ಮುಂದಿನ ದಿನಗಳಲ್ಲಿ ಪಡೆಯಲು ಯಾವುದೇ ಸಮಸ್ಯೆಯಿರುವುದಿಲ್ಲ.

ಕಂಪನಿಯು ಆಗಸ್ಟ್ 2010ರಿಂದ ಮ್ಯೂಚ್ಯುಯಲ್ ಫಂಡ್ ಗಳಲ್ಲಿ ಚಾಲ್ತಿ ಖಾತೆಯಲ್ಲಿ ಉಳಿಯುವ ಹೆಚ್ಚಿನ ಹಣವನ್ನು ಹೂಡುವುದನ್ನು ಪ್ರಾರಂಭಿಸಿದೆ. ಈ ಹೂಡಿಕೆಯನ್ನು Debt based ಮ್ಯೂಚ್ಯುಯಲ್ ಫಂಡ್ ಗಳಲ್ಲಿ ವಾರಾಂತ್ಯದ ರಜಾ ದಿನಗಳಲ್ಲಿ ಹೂಡಲಾಗುತ್ತದೆ. ಇದರಿಂದ ಕಂಪನಿಯು ತೆರಿಗೆ ರಹಿತ ಡಿವಿಡೆಂಟ್ ಗಳಿಸುತ್ತದೆ. ಸದರಿ ವರ್ಷದಲ್ಲಿ ಕಂಪನಿಯು ಸುಮಾರು ರೂ.1.57 ಕೋಟಿ ಆದಾಯ ಗಳಿಸಿದೆ.

### ಇ-ಆಡಳಿತ

ಸರ್ಕಾರದಿಂದ ಹೊರಡಿಸಿರುವ ಕೆ.ಟಿ.ಪಿ.ಪಿ ಕಾಯ್ದೆ 1999 ಹಾಗೂ ಮಾಹಿತಿ ಹಕ್ಕು ಕಾಯ್ದೆ 2000 ಅನ್ನು ಈ ಕಂಪನಿಯಲ್ಲಿ ಎಲ್ಲಾ ಹಂತದ ಚಟುವಟಿಕೆಗಳಲ್ಲಿ ಅನುಸರಿಸಲಾಗುತ್ತಿದೆ. ಇದಕ್ಕಾಗಿ ಕಂಪನಿಯು ಎಲ್ಲಾ ಉಪ ವಿಭಾಗ ಮಟ್ಟದಲ್ಲಿ ಗಣಕೀಕರಣಗೊಳಿಸಲಾಗಿದ್ದು, 2010-11ನೇ ಸಾಲಿನಿಂದ ಎಲ್ಲಾ ಲೆಕ್ಕಪತ್ರಗಳನ್ನು Tally Accounting System ನಲ್ಲಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಕಂಪನಿಯ ಆಡಳಿತವನ್ನು ಬಲಪಡಿಸುವ ದೃಷ್ಟಿಯಿಂದ ಹೆಚ್‌ಆರ್‌ಡಿ, ಇಆರ್‌ಪಿ ಸಲ್ಯೂಷನ್ ಮತ್ತು ಹೆಚ್‌ಆರ್‌ಎಂಎಸ್ ಸಾಫ್ಟ್‌ವೇರ್ ಅನ್ನು ಅಳವಡಿಸಲು ಕ್ರಮ ತೆಗೆದುಕೊಂಡಿದೆ.

### ನೌಕರರ ಶ್ರೇಯೋಭಿವೃದ್ಧಿ

ಕೆ.ಆರ್.ಐ.ಡಿ.ಎಲ್. ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಹೆಚ್ಚಿನ ಪರಿಜ್ಞಾನ ಹೊಂದಲು ಅನುಕೂಲವಾಗುವುದಕ್ಕೆ ಹಾಗೂ ಕಟ್ಟಡ ನಿರ್ಮಾಣ ತಂತ್ರಜ್ಞಾನದ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳುವುದಕ್ಕಾಗಿ, ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಸಂಸ್ಥೆಯಲ್ಲಿಯೇ ಹಮ್ಮಿಕೊಳ್ಳಲಾಗಿರುತ್ತದೆ ಹಾಗೂ ಇತರೆ ತರಬೇತಿ ಶಿಬಿರಗಳಿಗೆ ನಿಯೋಜಿಸಲಾಗಿರುತ್ತದೆ. ಕಂಪನಿಯು ಮುಂದಿನ ವರ್ಷಗಳಲ್ಲಿ ಉತ್ಸಾಹಿ ನೌಕರರನ್ನು ನೀಡುವ ದೃಷ್ಟಿಯಿಂದ ಅಕ್ಟೋಬರ್-2010 ರಂದು 10 ಜನ ಇಂಜಿನಿಯರ್‌ಗಳನ್ನು ನೇಮಿಸಿಕೊಂಡು ಮತ್ತು 2011ನೇ ಸಾಲಿನಲ್ಲಿ 29 ಇಂಜಿನಿಯರ್‌ಗಳನ್ನು ನೇಮಕ ಮಾಡಿಕೊಳ್ಳಲು ನಿರ್ಧರಿಸಿದೆ, ಹಂತ ಹಂತವಾಗಿ ಹೆಚ್ಚಿನ ಇಂಜಿನಿಯರ್‌ಗಳನ್ನು ನೇಮಿಸಿಕೊಳ್ಳಲು ಉದ್ದೇಶಿಸಲಾಗಿದೆ.

major role to play. The Government of Karnataka has also given exemption under section 4(g) of KTPP Act 1999 upto Rs.1.00 Crore which will enable the company to get more works without going for tenders. The exemption under Transparency Act will be expiring on 31.3.2012. All efforts will be made to get further exemption under the Act upto Rs.2.00 Crores for a further period of three years.

The Government is investing lot of funds to create infrastructure facility in rural areas and thus Company may not face much problem in getting sufficient work in the near future.

The Company has also with due care and caution and in consultation with recognized Bankers, been making investments in Mutual Funds from August 2010. The Company is using surplus funds available in current accounts to make investment in Debt based Mutual Funds during week ends and holidays. Through these investments, the Company has earned Rs.1.57 Crores tax free dividend during the year.

### E-GOVERNANCE

Transparency in the Public Procurement Act 1999 & Right to Information Act 2000 legislated by the Government is followed in the Company at all level of activities. The Company is committed to principles of Transparency and Right to Information, quality, cost effectiveness and timely deliveries. To meet these commitments, your Company has taken steps to introduce Computerization in all its sub-divisions by introducing Tally System of Accounting from the Financial Year 2010-11. The Company has also taken steps to implement ERP Solutions and HRMS software's to strengthen project monitoring systems and HRD administrations.

### HUMAN RESOURCE DEVELOPMENT

KRIDL is continuously encouraging employees to acquire and update the latest development and techniques in construction activity. KRIDL organizes some in house training programmes and deputes employees for training outside the State also. To infuse fresh blood into the Company, the Company has appointed 10 Engineers in 2010 and taken steps to appoint 29 more Engineers during 2011 and planned to appoint more in the coming years in a phased manner.

### ಇಂಧನ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣ

ಕಂಪನಿಯು ಮುಖ್ಯವಾಗಿ ನಿರ್ಮಾಣ ವ್ಯವಹಾರದಲ್ಲಿ ತೊಡಗಿರುವುದರಿಂದ ಕಂಪನಿಗಳ (ನಿರ್ದೇಶಕರ ಮಂಡಲಿಯ ವರದಿಯಲ್ಲಿ ವಿವರಗಳ ಪ್ರಕಟಪಡಿಸುವಿಕೆ) ನಿಯಮಗಳು, 1988 ರನ್ವಯ ಇಂಧನ ಸಂರಕ್ಷಣೆಯ ವಿವರಗಳು ಕಂಪನಿಗೆ ಅನ್ವಯಿಸುವುದಿಲ್ಲ.

### ವಿದೇಶಿ ವಿನಿಮಯದ ಗಳಿಕೆ ಮತ್ತು ವೆಚ್ಚ

ವರದಿಯ ವರ್ಷದಲ್ಲಿ ವಿದೇಶಿ ವಿನಿಮಯದಿಂದ ಯಾವುದೇ ಗಳಿಕೆ ಮತ್ತು ವೆಚ್ಚವಿರುವುದಿಲ್ಲ.

### ನೌಕರರ ವಿವರಗಳು

ಕಂಪನಿಗಳ ಕಾಯ್ದೆ 1956ರ ಅಧಿನಿಯಮ 217 (2ಎ) ಅಡಿಯಲ್ಲಿ ವಿವರಗಳನ್ನು ಸಲ್ಲಿಸಬೇಕಾಗಿರುವ ನೌಕರರು ಯಾರೂ ಇಲ್ಲ.

### ಲೆಕ್ಕ ಪರಿಶೋಧಕರು

ಮೆ॥ ಜ್ಞಾನೋಭ ಅಂಡ್ ಭಟ್ , ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು 2010–11ನೇ ಹಣಕಾಸಿನ ವರ್ಷಕ್ಕೆ ಶಾಸನ ಬದ್ದ ಲೆಕ್ಕ ಪರಿಶೋಧಕರೆಂದು ನಿಯಂತ್ರಕರು ಮತ್ತು ಭಾರತದ ಆಡಿಟರ್ ಜನರಲ್‌ರವರು ನೇಮಕ ಮಾಡಿರುತ್ತಾರೆ ಹಾಗೂ 2011–12ನೇ ಸಾಲಿಗೂ ಸಹ ಮೆ॥ ಜ್ಞಾನೋಭ ಅಂಡ್ ಭಟ್, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ರವರನ್ನು ಶಾಸನ ಬದ್ಧ ಲೆಕ್ಕ ಪರಿಶೋಧಕರೆಂದು ನೇಮಕ ಮಾಡಿರುತ್ತಾರೆ.

### ಶಾಸನ ಲೆಕ್ಕಪರಿಶೋಧಕರ ಆಕ್ಷೇಪಣೆಗಳಿಗೆ ಉತ್ತರ

ಶಾಸನ ಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳಿಗೆ ನೀಡಿರುವ ಉತ್ತರಗಳನ್ನೊಳಗೊಂಡ ಶಾಸನಬದ್ಧ ಲೆಕ್ಕಪರಿಶೋಧಕರ ವರದಿ ತಾರೀಖು 30/09/2011 ಅನ್ನು ಈ ವರದಿಗೆ ಲಗತ್ತಿಸಲಾಗಿದೆ.

### ಭಾರತದ ನಿಯಂತ್ರಕರು ಮತ್ತು ಆಡಿಟರ್ ಜನರಲ್‌ರವರಿಂದ ಲೆಕ್ಕಪತ್ರಗಳ ಪುನರ್ ಪರಿಶೀಲನೆ

ನಿಯಂತ್ರಕರು ಮತ್ತು ಆಡಿಟರ್ ಜನರಲ್‌ರವರು ನೀಡಿರುವ ನಿರಾಕ್ಷೇಪಣೆಗಳ ಪ್ರಮಾಣ ಪತ್ರವನ್ನು ಪಡೆದ ನಂತರ ನೀಡಲಾಗುವುದು.

### ನೌಕರರು

ನೌಕರರೊಂದಿಗೆ ಉತ್ತಮ ಸಂಬಂಧ ಹೊಂದಿದ್ದು ಕಂಪನಿಯ ನೌಕರರ ನಿಸ್ಪೃಹತೆ, ಕಠಿಣ ಶ್ರಮ ಮತ್ತು ಸಹಕಾರವನ್ನು ನಿರ್ದೇಶಕರು ಶ್ಲಾಘಿಸಿದ್ದಾರೆ.

### ಶಾಸನಗಳ ಪರಿಪಾಲನೆ

ಕಂಪನಿಯು, ಕಂಪನಿ ಕಾಯ್ದೆ, 1956, ಕಾರ್ಮಿಕ ಕಾನೂನುಗಳು ಮತ್ತು ಇತರ ಕಾರ್ಪೋರೇಟ್ ಕಾನೂನುಗಳ ಅಡಿಯಲ್ಲಿ ನಿಗದಿಪಡಿಸಿರುವ ವಿವಿಧ ಶಾಸನಗಳ ಅಗತ್ಯತೆಗಳನ್ನು ಪಾಲಿಸಿದೆ.

### ENERGY CONSERVATION & POLLUTION CONTROL

The particulars of energy conservation in accordance with the Companies (Disclosure of particulars in the Report of the Board of Directors), Rules 1988, is not applicable to the Company as it is mainly engaged in the business of construction services.

### FOREIGN EXCHANGE EARNINGS AND OUT GO

During the year under report there were no foreign exchange earnings and out go.

### PARTICULARS OF EMPLOYEES

There are no employees whose particulars are required to be furnished under Section 217(2A) of the Companies Act, 1956.

### AUDITORS

Messrs Gnanoba & Bhat, Chartered Accountants, Bangalore, were the Statutory Auditors for the financial year 2010-11 who were appointed by the Comptroller and Auditor General of India to Audit the Accounts for the FY 2010-11. C & AG of India has appointed Messrs Gnanoba & Bhat, Chartered Accountants, Bangalore as Statutory Auditors for the FY 2011-12 also.

### REPLIES TO STATUTORY AUDITORS OBSERVARTIONS

Replies to observations contained in Statutory Auditors report dated 30.09.2011 are given as an Addendum to this report.

### REVIEW OF ACCOUNTS BY THE COMPTROLLER AND AUDITOR GENERAL OF INDIA

Comments certificate issued by Comptroller and Auditor General is enclosed.

### EMPLOYEES

Relations with employees were cordial and your directors wish to place on record their appreciation of the dedication, hard work and contribution by the employees of your Company at all levels during the year.

### STATUTORY COMPLIANCE

Your Company has complied with the various statutory requirements prescribed under the Companies Act, 1956, Labour Laws and other Corporate Laws wherever applicable.

### ನಿರ್ದೇಶಕರು

ಸರ್ಕಾರವು ಪ್ರಸಕ್ತ ವರ್ಷದಲ್ಲಿ ಈ ಕೆಳಕಂಡ ನಿರ್ದೇಶಕರುಗಳನ್ನು ನೇಮಿಸಿರುತ್ತದೆ.

ಅ) ಧಾರವಾಡ ಜಿಲ್ಲೆಯ ಕುಂದಗೋಳು ಕ್ಷೇತ್ರದ ಶಾಸಕರಾದ ಶ್ರೀ ಎಸ್.ಐ. ಚಿಕ್ಕನಗೌಡ್ರ ಇವರನ್ನು ಕಂಪನಿಯ ಅಧ್ಯಕ್ಷರಾಗಿ ಎನ್. ಗೋಕುಲ್‌ರಾಮ್, ಭಾಆಸೇ., ಅವರ ಬದಲಾಗಿ ದಿನಾಂಕ: 20/11/2010 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಆ) ಶ್ರೀ. ಪಿ.ಎ. ಮೇಘಣ್ಣನವರ್, ಕೆ.ಎ.ಎಸ್., ನಿರ್ದೇಶಕರು, ಗ್ರಾಮೀಣ ಮೂಲಭೂತ ಸೌಕರ್ಯ ಮತ್ತು ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರನ್ನು ಕಂಪನಿಯ ನಿರ್ದೇಶಕರಾಗಿ ದಿನಾಂಕ:28/01/2011 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಇ) ಡಾ|| ಅಮಿತ ಪ್ರಸಾದ್, ಭಾಆಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ.ಪಿ. ರವಿಕುಮಾರ್, ಭಾಆಸೇ., ಅವರ ಬದಲಾಗಿ ದಿನಾಂಕ:13/06/2011 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಈ) ಶ್ರೀ ಸಿ.ಕೆ. ಶಿವಣ್ಣ, ಭಾಅಸೇ., ಇವರನ್ನು ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿ ಶ್ರೀ. ಅಶೋಕ್ ಕುಮಾರ್ ಸಿಂಗ್, ಭಾಅಸೇ., ಅವರ ಬದಲಾಗಿ ದಿನಾಂಕ:06/07/2011 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಉ) ಶ್ರೀ ಬಿ.ಜಿ. ಗುರುಪಾದಸ್ವಾಮಿ., ಕೆಇಎಸ್., ಸರ್ಕಾರದ ಕಾರ್ಯದರ್ಶಿಗಳು, ನೀರಾವರಿ ಇಲಾಖೆ ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ. ಪಿ.ಎನ್ ಶ್ರೀನಿವಾಸಚಾರಿ, ಭಾಆಸೇ., ಅವರ ಬದಲಾಗಿ ದಿನಾಂಕ:13/06/2011 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಊ) ಶ್ರೀ ನವೀನ್‌ರಾಜ್ ಸಿಂಗ್., ಭಾಆಸೇ., ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ ಮಂಜುನಾಥ್ ಪ್ರಸಾದ್, ಭಾಆಸೇ., ಅವರ ಬದಲಾಗಿ ದಿನಾಂಕ:13/06/2011 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಋ) ಶ್ರೀ ಕೆ.ಬಿ. ದೇವರಾಜ್., ಕೆಇಎಸ್., ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ ಮೃತ್ಯುಂಜಯ ಸ್ವಾಮಿ, ಕೆಇಎಸ್., ಅವರ ಬದಲಾಗಿ ದಿನಾಂಕ: 08/09/2011 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಶ್ರೀ ಎನ್. ಗೋಕುಲ ರಾಂ, ಭಾ.ಆ.ಸೇ., ಇವರು ಅಧ್ಯಕ್ಷರಾಗಿ, ಶ್ರೀ ಅಶೋಕ್ ಕುಮಾರ್ ಸಿಂಗ್, ಭಾಅಸೇ., ವ್ಯವಸ್ಥಾಪಕ ನಿರ್ದೇಶಕರು ಮತ್ತು ಶ್ರೀ ಎಂ.ಆರ್. ಕಾಂಬ್ಳೆ, ಭಾಆಸೇ., ಶ್ರೀ ಪಿ. ರವಿಕುಮಾರ್, ಭಾಆಸೇ., ಶ್ರೀ ಮಂಜುನಾಥ್ ಪ್ರಸಾದ್, ಭಾಆಸೇ., ಶ್ರೀ ಆರ್.ಪಿ. ಕುಲಕರ್ಣಿ, ಕೆ ರವರುಗಳು ನಿರ್ದೇಶಕರಾಗಿ ಪ್ರಸಕ್ತ ವರ್ಷದಲ್ಲಿ ಸೇವೆ ಸಲ್ಲಿಸಿರುವುದನ್ನು ಶ್ಲಾಘಿಸಲಾಗಿದೆ.

### ನಿರ್ದೇಶಕರ ಹೊಣೆಗಾರಿಕೆ

1956ರ ಕಂಪನಿಗಳ ಅಧಿನಿಯಮದ 217 (2ಎಎ)ನೇ ಅಧಿನಿಯಮದ ಅಡಿಯಲ್ಲಿನ ಉಪಬಂಧಗಳಿಗೆ ಅನುಗುಣವಾಗಿ ನಿರ್ದೇಶಕರು ಈ ಮುಂದಿನ ಅಂಶಗಳನ್ನು ತಿಳಿಸಿದ್ದಾರೆ:

### DIRECTORATE

The Government of Karnataka has made changes in the directorships during the year of report as detailed below:

1. Sri. S.I. Chikkanagoudar, Hon'ble MLA of Kundagol Constituency, Dharwad District has been appointed as Chairman of the Company in place of Sri.N.Gokulram, w.e.f 20.11.2010.
2. Sri.P.A.Meghannavar, KAS,Director, Rural Infrastructure and Ex-officio, Joint Secretary to Government, RD&PR Department has been appointed as Director of the Company w.e.f 28.1.2011.
3. Dr. Amita Prasad, IAS, Principal Secretary to Government, RD&PR Department has been appointed as Director of the Company in place of Sri.P.Ravikumar, IAS, w.e.f 13.6.2011.
4. Sri.C.K.Shivanna, IFS, has been appointed as Managing Director of the Company in place of Sri.Ashok Kumar Singh, IFS, w.e.f 06.7.2011.
5. Sri.B.G.Gurupadaswamy, KES, Secretary to Government, Water Resource Department has been appointed as Director of the Company in place of Sri.P.N.Srinivasachari, IAS, w.e.f 13.6.2011.
6. Sri.Naveen Raj Singh, IAS, Commissioner, Social Welfare Department has been appointed as Director of the Company in place of Sri.Manjunath Prasad, IAS, w.e.f 13.6.2011.
7. Sri.K.B.Devaraj, KES Secretary to Government, Public Works Department has been appointed as Director of the Company in place of Sri.Mruthyunajaya Swamy, KES w.e.f 08.9.2011.

The Board places on record its deep appreciation for the valuable services rendered by Late N. Gokul Ram, IAS as Chairman, Sri.Ashok Kumar Singh, IFS as Managing Director and Sri.M.R.Kamble, IAS, Sri.P.Ravikumar, IAS, Sri.N.Manjunath Prasad, IAS, Sri.R.P.Kulkarni, KES, Sri.P.N.Srinivasachari, IAS, as Directors of the Company during the year under review.

### DIRECTORS' RESPONSIBILITY STATEMENT

Pursuant to the provisions under Section 217 (2AA) of the Companies Act, 1956, your Directors state:

ಎ) ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವಾಗ ಅನ್ವಯವಾಗುವ ಲೆಕ್ಕಪತ್ರದ ಗುಣಮಟ್ಟಗಳನ್ನು ಅನುಸರಿಸಲಾಗಿದೆ ಹಾಗೂ ಪಾಲಿಸುತ್ತಿದ್ದ ನಿಯಮದಲ್ಲಿ ಬದಲಾವಣೆಗಳಾಗಿದ್ದಲ್ಲಿ ಅಗತ್ಯವಾದ ವಿವರಣೆ ಕೊಡಲಾಗಿದೆ.

ಬಿ) ವಾರ್ಷಿಕ ವರ್ಷದ ಕೊನೆಯಲ್ಲಿ ಕಂಪನಿಯ ಸ್ಥಿತಿಗತಿಗಳು ಮತ್ತು ಆ ಅವಧಿಯ ಕಂಪನಿಯ ನಷ್ಟಗಳ ವಾಸ್ತವ ಚಿತ್ರಣವನ್ನು ನೀಡುವ ಸಲುವಾಗಿ ನಿರ್ದೇಶಕರು ಸಮಂಜಸವಾದ ಮತ್ತು ವಿವೇಚನಾಯುಕ್ತವಾದ ಲೆಕ್ಕಪತ್ರ ಕಾರ್ಯನೀತಿಗಳನ್ನು ಆಯ್ದುಕೊಂಡು ಅವುಗಳನ್ನು ನಿರಂತರವಾಗಿ ಅನ್ವಯಿಸಿ ನಿರ್ಣಯಗಳನ್ನು ಮತ್ತು ಅಂದಾಜುಗಳನ್ನು ಕೈಗೊಂಡಿದ್ದಾರೆ.

ಸಿ) ಕಂಪನಿಯ ಆಸ್ತಿಗಳನ್ನು ರಕ್ಷಿಸುವ ಮತ್ತು ಮೋಸ ಮತ್ತು ಇತರ ಅಕ್ರಮಗಳನ್ನು ನಿವಾರಿಸುವ ಮತ್ತು ಪತ್ತೆಹಚ್ಚುವ ಸಲುವಾಗಿ 1956ರ ಕಂಪನಿಗಳ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಲೆಕ್ಕಪತ್ರಗಳ ದಾಖಲೆಗಳನ್ನು ನಿರ್ವಹಿಸುವ ಬಗ್ಗೆ ಸೂಕ್ತ ಮತ್ತು ಸಾಕಷ್ಟು ಜಾಗರೂಕತೆಯನ್ನು ವಹಿಸಲಾಗಿದೆ.

ಡಿ) ಚಾಲ್ತಿಯಲ್ಲಿರುವ ಸಂಸ್ಥೆಯ ಆಧಾರದ ಮೇಲೆ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಗಿದೆ.

## ಕೃತಜ್ಞತೆಗಳು

ನಿರ್ದೇಶಕರುಗಳು ಭಾರತ ಸರ್ಕಾರಕ್ಕೆ, ಕರ್ನಾಟಕ ಸರ್ಕಾರಕ್ಕೆ, ಸರ್ಕಾರದ ಇಲಾಖೆಗಳಿಗೆ, ಮಾನ್ಯ ಶಾಸಕರುಗಳಿಗೆ, ಶಾಸಕಾಂಗ ಸಮಿತಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ, ಹಣಕಾಸು ಇಲಾಖೆಗೆ, ಜಿಲ್ಲಾ ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳಿಗೆ ತಾವು ನೀಡಿದ ಸಹಕಾರ, ಮಾರ್ಗದರ್ಶನ ಮತ್ತು ಬೆಂಬಲಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತಾ, ಈ ರೀತಿಯ ಸಹಕಾರ ಮತ್ತು ಬೆಂಬಲ ಇಲ್ಲದಿದ್ದಲ್ಲಿ ಪ್ರಸಕ್ತ ವರ್ಷದಲ್ಲಿನ ಪ್ರಗತಿ ಮಾಡಲಾಗುತ್ತಿರಲಿಲ್ಲವೆಂದು ತಿಳಿಸಿದ್ದಾರೆ. ಪ್ರಸಕ್ತ ವರ್ಷದಲ್ಲಿ ಗ್ರಾಹಕರು, ಬ್ಯಾಂಕಿನವರು, ಸಲಹೆಗಾರರು, ಶಾಸನಬದ್ಧ ಲೆಕ್ಕ ಪರಿಶೋಧಕರು, ಆಂತರಿಕ ಲೆಕ್ಕ ಪರಿಶೋಧಕರು ಮತ್ತು ಅಕೌಂಟೆಂಟ್ ಜೆನರಲ್ ಲೆಕ್ಕ ಪರಿಶೋಧಕರು ಮತ್ತು ನೌಕರರು ನಿಗಮಕ್ಕೆ ತಮ್ಮ ಅಮೂಲ್ಯವಾದ ಬೆಂಬಲ ಹಾಗೂ ಸಹಕಾರ ನೀಡಿರುವುದಕ್ಕೆ ಪ್ರಶಂಶಿಸಲಾಗಿದೆ. ಮುಂಬರುವ ವರ್ಷಗಳಲ್ಲಿ ಸಹ ಇದೇ ರೀತಿ ಬೆಂಬಲವನ್ನು ನಿರೀಕ್ಷಿಸಲಾಗುವುದೆಂದು ತಿಳಿಸಿದರು.

ಮಂಡಳಿಯ ಪರವಾಗಿ,

a) That in the preparation of the annual accounts, the applicable accounting standards have been followed along with proper explanation relating to material departures;

b) That the directors have selected such accounting policies and applied them consistently and made judgments and estimates that are reasonable and prudent so as to give a true and a fair view of the state of affairs of the Company at the end of the financial year and of the loss of the Company for that period;

c) That the directors have taken proper and sufficient care for the maintenance of adequate accounting records in accordance with the provisions of the Companies Act, 1956 for safeguarding the assets of the Company and for preventing and detecting fraud and other irregularities;

d) That the directors have prepared the annual accounts on a going concern basis.

## ACKNOWLEDGEMENT

Your Directors would like to express their gratitude and appreciation for the valuable co-operation, guidance and support given by the Government of India, Government of Karnataka, Government Departments, Hon'ble Members of Legislature, the Legislature Committee, the RDPR Department, the Finance Department, the Zilla Panchyaths and local bodies without which your Company could not have performed well during the year and look forward the same continued whole hearted support in the years to come. Your Directors wish to place on record their sincere appreciation to the Customers, Bankers, Consultants, Statutory Auditors, Internal Auditors and the Accountant General and Employees for their relentless efforts and valuable support extended during the year under report and look forward to receive similar support in future. The Directors also thank the Shareholder namely the Government of Karnataka for the continued confidence reposed in the Company.

For and on behalf of the Board

| | | | |
|---|---|---|---|
| ಸಹಿ/– | **Sd/-** | ಸಹಿ/– | **Sd/-** |
| (ಸಿ.ಕೆ. ಶಿವಣ್ಣ) | **(C.K.Shivanna)** | (ಪ್ರಭಾಕರ್ ಹೆಚ್.ಚಿನಿ) | **(Prabhakar H.Chini)** |
| ವ್ಯವಸ್ಥಾಪಕ ನಿರ್ದೇಶಕರು | Managing Director | ಮುಖ್ಯ ಇಂಜಿನಿಯರ್, ಪಿಆರ್‌ಇಡಿ | Chief Engineer |
| ಕೆ.ಆರ್.ಐ.ಡಿ.ಎಲ್., ಬೆಂಗಳೂರು | KRIDL, Bangalore | ಮತ್ತು ನಿರ್ದೇಶಕರು, ಕೆ.ಆರ್.ಐ.ಡಿ.ಎಲ್ | PRED & Director, KRIDL |

ಸ್ಥಳ: ಬೆಂಗಳೂರು
ದಿನಾಂಕ: 17.12.2011

Place: Bangalore
Date : 17.12.2011

## ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು ಇದರ 31ನೇ ಮಾರ್ಚ್ 2011ಕ್ಕೆ ಅಂತ್ಯಗೊಂಡ ವರ್ಷದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 1956 619(4)ನೇ ಪ್ರಕರಣದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಮಾಡಿರುವ ಟೀಕೆ ಟಿಪ್ಪಣಿಗಳು.

## COMMENTS OF THE COMPTROLLER AND AUDITOR GENERAL OF INDIA UNDER SECTION 619(4) OF THE COMPANIES ACT, 1956 ON THE ACCOUNTS OF KARNATAKA RURAL INFRASTRUCTURE DEVELOPMENT LIMITED, BANGALORE, FOR THE YEAR ENDED 31 MARCH 2011.

ಕಂಪನಿಗಳ ಅಧಿನಿಯಮ, 1956ರ ಮೇರೆಗೆ ನಿಯಮಿಸಿರುವ ಹಣಕಾಸು ವರದಿಯ ಚೌಕಟ್ಟಿಗೆ ಅನುಗುಣವಾಗಿ 2011ರ ಮಾರ್ಚ್ 31ಕ್ಕೆ ಕೊನೆಗೊಳ್ಳುವ **ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು** ಇದರ ಹಣಕಾಸಿನ ವಿವರಪಟ್ಟಿಗಳನ್ನು ಸಿದ್ಧಪಡಿಸುವುದು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಕಂಪನಿಗಳ ಅಧಿನಿಯಮ, 1956ರ 619 (2)ನೇ ಪ್ರಕರಣದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪಾಲರು ನೇಮಕ ಮಾಡಿರುವ ಶಾಸನಬದ್ಧ ಲೆಕ್ಕಪರಿಶೋಧಕರು, ಅವರ ವೃತ್ತಿಸಂಸ್ಥೆಯಾದ ಭಾರತದ ಚಾರ್ಟರ್ಡ್ ಅಕೌಂಟೆಂಟರು ಗೊತ್ತುಪಡಿಸಿರುವ ಲೆಕ್ಕಪರಿಶೋಧನೆ ಮತ್ತು ಖಾತ್ರಿ ಮಾನಕಗಳಿಗೆ ಅನುಸಾರವಾಗಿ ಸ್ವತಂತ್ರ ಲೆಕ್ಕಪರಿಶೋಧನೆಯನ್ನು ಆಧರಿಸಿ ಕಂಪನಿಗಳ ಅಧಿನಿಯಮ, 1956ರ 227ನೇ ಪ್ರಕರಣದ ಮೇರೆಗೆ ಈ ಹಣಕಾಸಿನ ವಿವರಪಟ್ಟಿಗಳನ್ನು ಕುರಿತು ಅಭಿಪ್ರಾಯವನ್ನು ವ್ಯಕ್ತಪಡಿಸಲು ಜವಾಬ್ದಾರರಾಗಿದ್ದಾರೆ. ಇದನ್ನು ಅವರು ನಿರ್ವಹಿಸಿದ್ದಾರೆಂದು ತಿಳಿಸಲಾಗಿದೆ. ಅವರ ಲೆಕ್ಕಪರಿಶೋಧನಾ ವರದಿ ದಿನಾಂಕ: 30ನೇ ಸೆಪ್ಟಂಬರ್ 2011ನ್ನು ನೋಡಿ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪಾಲರ ಪರವಾಗಿ, **ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು** ಇದರ **2011ರ ಮಾರ್ಚ್ 31ರಂದು** ಕೊನೆಗೊಳ್ಳುವ ವರ್ಷದ ಹಣಕಾಸು ವಿವರಪಟ್ಟಿಗಳ ಪೂರಕ ಲೆಕ್ಕಪರಿಶೋಧನೆಯನ್ನು ಕಂಪನಿಗಳ ಅಧಿನಿಯಮ, 1956ರ 619 (3) (ಬಿ) ಪ್ರಕರಣದ ಮೇರೆಗೆ ನಡೆಸಲಾಗಿದೆ. ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರ ಕಾರ್ಯಕಾರಿ ಕಾಗದಪತ್ರಗಳನ್ನು ನೋಡದೆ ಸ್ವತಂತ್ರವಾಗಿ ನಿರ್ವಹಿಸಲಾಗಿದೆ ಮತ್ತು ಅದು ಮೂಲತಃ ಶಾಸನಬದ್ಧ ಲೆಕ್ಕಪರಿಶೋಧಕರ ಮತ್ತು ಕಂಪನಿ ಸಿಬ್ಬಂದಿಯ ವಿಚಾರಣೆಗಳನ್ನು ಮತ್ತು ಕೆಲವು ಲೆಕ್ಕಪತ್ರ ದಾಖಲೆಗಳ ಆಯ್ಕೆ ಪರೀಕ್ಷೆ ಮಾಡುವುದಕ್ಕೆ ಸೀಮಿತವಾಗಿದೆ. ನಾನು ಲೆಕ್ಕಪರಿಶೋಧನೆ ಮಾಡಿರುವ ಪ್ರಕಾರ ಕಂಪನಿಗಳ ಅಧಿನಿಯಮ, 1956ರ 619 (4) ನೇ ಪ್ರಕರಣದ ಮೇರೆಗೆ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಬಗ್ಗೆ ಅಥವಾ ಪೂರಕವಾಗಿ ಯಾವುದೇ ಟೀಕೆ ಟಿಪ್ಪಣಿಗೆ ಅವಕಾಶವಾಗುವಂಥ ಯಾವುದೇ ಗಮನಾರ್ಹ ಸಂಗತಿಯು ಗಮನಕ್ಕೆ ಬಂದಿಲ್ಲ.

ಭಾರತದ ಲೆಕ್ಕನಿಯಂತ್ರಕರು ಮತ್ತು
ಮಹಾಲೆಕ್ಕಪರಿಶೋಧಕರ ಪರವಾಗಿ
ಸಹಿ/–
**(ಡಿ.ಜೆ. ಭದ್ರ)**
ಪ್ರಧಾನ ಮಹಾಲೇಖಪಾಲರು,
(ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ)
ಕರ್ನಾಟಕ, ಬೆಂಗಳೂರು.

ಸ್ಥಳ : ಬೆಂಗಳೂರು
ದಿನಾಂಕ: 15ನೇ ಡಿಸೆಂಬರ್ 2011

The preparation of financial statements of **Karnataka Rural Infrastructure Development Limited, Bangalore** for the year ended **31 March 2011** in accordance with the financial reporting framework prescribed under Companies Act, 1956 is the responsibility of the management of the Company. The statutory auditors appointed by the Comptroller and Auditor General of India under Section 619(2) of the Companies Act, 1956 are responsible for expressing opinion on these financial statements under section 227 of the Companies Act, 1956 based on independent audit in accordance with the auditing and assurance standards prescribed by their professional body the Institute of Chartered Accountants of India. This is stated to have been done by them vide their Audit Report dated 30 September, 2011.

I, on behalf of the Comptroller and Auditor General of India, have conducted a supplementary audit, under section 619(3)(b) of the Companies Act, 1956, of the financial statements of **"Karnataka Rural Infrastructure Development Limited, Bangalore"** for the year ended **31 March 2011.** This supplementary audit has been carried out independently without access to the working papers of the statutory auditors and is limited primarily to inquiries of the statutory auditors and company personnel and a selective examination of some of the accounting records. On the basis of my audit nothing significant has come to my knowledge which would give rise to any comment upon or supplement to Statutory Auditors' report under section 619(4) of the Companies Act, 1956.

For and on behalf of the
Comptroller & Auditor General of India
Sd/-
**(D.J. BHADRA)**
Pr. Accountant General
(Civil and Commercial Audit)
Karnataka, Bangalore.

Place: Bangalore.
Dated: 15th December 2011

## 31.3.2011ಕ್ಕೆ ಕೊನೆಯಾಗುವ ವರ್ಷದ ಕೆಆರ್‌ಐಡಿಎಲ್ ಸಂಸ್ಥೆಯ ಲೆಕ್ಕಪತ್ರಗಳ ಬಗ್ಗೆ ಶಾಸನಬದ್ಧ ಲೆಕ್ಕಪರಿಶೋಧಕರು ಮಾಡಿರುವ ಆಕ್ಷೇಪಣೆಗಳಿಗೆ ಉತ್ತರ

## REPLIES TO THE STATUTORY AUDITORS OBSERVATIONS ON THE ACCOUNTS OF KRIDL FOR THE YEAR ENDED 31/03/2011.

| ಕ್ರ.ಸಂ<br>Sl.No. | ಆಕ್ಷೇಪಣೆಗಳು<br>Observations | ಆಡಳಿತ ಮಂಡಳಿಯ ಉತ್ತರಗಳು<br>Reply by the Management |
|---|---|---|
| 1 | ಆದಾಯ ಗುರುತಿಸುವುದು: ಕಾಮಗಾರಿಗಳು ಶೇಕಡವಾರು ಪೂರ್ಣಗೊಂಡಂತೆ ನಿಗಮದ ಆದಾಯವನ್ನು AS–7 ವಿಧಾನದ ಆಧಾರದ ಮೇರೆಗೆ ಗುರುತಿಸಲಾಗುವುದು. ದರ ಪಟ್ಟಿಯ ದರದಂತೆ ನಿರ್ವಹಿಸಿದ ಮೌಲ್ಯದ ಕಾಮಗಾರಿಗಳನ್ನು ಹೊರತುಪಡಿಸಿ, ಕಂಪನಿಯು ಸೇವಾ ಶುಲ್ಕವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಪ್ರಸಕ್ತ ವರ್ಷದ ಆದಾಯವನ್ನು ಗುರುತಿಸುವಲ್ಲಿ ವ್ಯತ್ಯಾಸವಿರುವುದರಿಂದ ಅದನ್ನು ನಿರ್ಧರಿಸಲಾಗುವುದಿಲ್ಲ.<br>Revenue Recognition: The Company recognizes the revenue based on percentage of completion method as per AS-7 except in the case of value of work done at SR rates where only Company's charges is recognized. Consequently there could be difference in revenue recognition during the year which is not ascertainable. | ವಹಿಸಿದ ಕಾಮಗಾರಿಗಳು ಶೇಕಡವಾರು ಪೂರ್ಣಗೊಂಡಂತೆ ನಿಗಮದಲ್ಲಿ ಅಪೂರ್ಣಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಆದಾಯವನ್ನು ಗುರುತಿಸುವ ಸಲುವಾಗಿ AS–7 ವಿಧಾನದ ಆಧಾರದ ಮೇರೆಗೆ ಗುರುತಿಸಲಾಗುವುದು. ವಾಸ್ತವಿಕ ವೆಚ್ಚ ಹಾಗೂ ಟೆಂಡರ್ ಮೊತ್ತದ ನಡುವಿನ ವ್ಯತ್ಯಾಸವನ್ನು ಸಮರ್ಥಿಸಿಕೊಳ್ಳಲಾಗದ ಕಾರಣ ನಿಗಮವು ಹೆಚ್ಚಿನ ಆದಾಯವನ್ನು ಗುರುತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.<br>In respect of uncompleted entrustment works, the revenue is recognized based on percentage of completion method as per AS7. The difference between Tender amount & actual expenditure cannot be ascertained & quantified in uncompleted tendered works. Hence the question of recognition of excess revenue does not arise. |
| 2 | ಹಾನಿಗೊಂಡ ಆಸ್ತಿಗಳ ಬಗ್ಗೆ ಅವಲೋಕನವನ್ನು ಮಾಡಿದಾಗ ಇದರ ಬಗ್ಗೆ ಕಂಪನಿಯು ಯಾವುದೇ ಕಾರ್ಯನೀತಿಯನ್ನು ರಚಿಸಿರುವುದಿಲ್ಲ. ತತ್ಪರಿಣಾಮವಾದ ಹಾನಿಯಿಂದ ಲೆಕ್ಕಪತ್ರದಲ್ಲಿ ನಷ್ಟ ಉಂಟಾಗುತ್ತದೆ. ಆದ್ದರಿಂದ, ಸ್ಥಿರಾಸ್ತಿಗಳನ್ನು ಅಧಿಕವಾಗಿ ತೋರಿಸಲಾಗಿದೆ.<br>The Company has not formed policy to review the impairment of assets held, consequently loss on account of impairment if any, is not quantified by the company. Hence Fixed Assets might be overstated to that extent. | ಕಂಪನಿಯು ಕಾರ್ಯನೀತಿಯನ್ನು ರಚಿಸಿದ್ದು, ಇದರಲ್ಲಿ ವಾರ್ಷಿಕ ದಾಸ್ತಾನುಗಳ ಜೊತೆಗೆ ಸ್ಥಿರಾಸ್ತಿಗಳನ್ನು ಸೇರಿರುತ್ತದೆ. ನಿರುಪಯುಕ್ತ ಮತ್ತು ಸಂಪೂರ್ಣ ಶಿಥಿಲಗೊಂಡ/ಸ್ಥಿರಾಸ್ತಿಗಳನ್ನು ಗುರುತಿಸಿ, ಇವುಗಳನ್ನು ಲೆಕ್ಕದಿಂದ ತೆಗೆದು ಹಾಕಲಾಗಿದೆ. ಪ್ರಸಕ್ತ ಸಾಲಿನಲ್ಲಿ ಕಂಪನಿಯ ಗುರುತಿಸಲಾದ ಆಸ್ತಿಗಳನ್ನು ಲೆಕ್ಕಪತ್ರದಿಂದ ತೆಗೆದು ಹಾಕಿರುವುದಿಲ್ಲ.<br>The company has formed policy of Annual Stock taking which includes fixed Assets also. Unserviceable and absolete/ broken fixed assets are identified, and the same will be written off in the book of accounts. During the year the Company has not identified such assets and hence there is no write off on this account during the year. |
| 3 | 2003–04 ರಿಂದ 2010–11ರ ವರೆಗಿನ ಬಾಕಿ ಸಾಲಗಾರರ ಅಡಿಯಲ್ಲಿ ತೋರಿಸಲಾದ ಬಾಕಿಯನ್ನು ಪಕ್ಷಿಕಾರರು ಸ್ಥಿರೀಕರಿಸಿಲ್ಲ. ಅಲ್ಲದೆ, 2003–04 ರಿಂದ 2007–08ರ ಲೆಕ್ಕ ವರ್ಷಗಳಿಗೆ ಸಂಬಂಧಪಟ್ಟಂತೆ ಒಟ್ಟಾರೆ 2318.25 ಲಕ್ಷ ರೂ.ಗಳಷ್ಟು ಮೊತ್ತಕ್ಕೆ ಸಂಬಂಧಿಸಿದ ಚಿಲ್ಲರೆ ಸಾಲಗಾರರನ್ನು ಕಾಲಪರಿಮಿತಿಯಿಂದ ಪ್ರತಿಷೇಧಿಸಲಾಗಿದೆ ಹಾಗೂ ಕಂಪನಿಯು ಸಂದೇಹಾಸ್ಪದ ಸಾಲಗಳು ಯಾವುದಾದರೂ ಇದ್ದರೆ, ಅವುಗಳಿಗೆ ಯಾವುದೇ ಉಪಬಂಧ ಕಲ್ಪಿಸಿಲ್ಲ, ರೂ.439.88 ಲಕ್ಷಗಳು ಮಾತ್ರ ಮಾಡಲಾಗಿದೆ. | ಕಂಪನಿಯು 5 ವರ್ಷಗಳಿಗೆ ಮೀರಿದ ಬರಬೇಕಾದ ಬಾಕಿಗಳ ಮೇಲೆ ಒದಗಣೆ ಮಾಡುತ್ತಿದೆ. ಅದರಂತೆ ಕಂಪನಿಯು 2004–05ನೇ ಸಾಲಿಗೆ ಸೇರಿದ ರೂ.254.62 ಲಕ್ಷಗಳನ್ನು ಒದಗಣೆ ಮಾಡಿರುತ್ತದೆ. 2004–05ನೇ ಸಾಲಿಗೆ ಸೇರಿದ ರೂ.185.26 ಲಕ್ಷಗಳನ್ನು ಸಹ ಮಹಾಲೇಖಪಾಲರ ಒತ್ತಾಯದ ಮೇರೆಗೆ ಒದಗಣೆ ಮಾಡಲಾಗಿದೆ ಹಾಗೂ ಈ ಮೊತ್ತವು 2005–06ನೇ ಸಾಲಿನ ಬರಬೇಕಾದ ಬಾಕಿ ಮೊತ್ತ ರೂ.823.82 ಲಕ್ಷಗಳಲ್ಲಿ ಸೇರಿದೆ. ಈ ಎಲ್ಲಾ ಬರಬೇಕಾದ ಮೊತ್ತಗಳು ಸರ್ಕಾರದ ಇಲಾಖೆಗಳಿಂದ ಬರಬೇಕಾಗಿರುವುದರಿಂದ ಪೂರ್ಣ ಮೊತ್ತಕ್ಕೆ ಒದಗಣೆ ಮಾಡುವುದು ಉಚಿತವಲ್ಲವೆಂದು ಭಾವಿಸಿ ಹಾಗೂ ಉಪ ವಿಭಾಗ ಮಟ್ಟದಲ್ಲಿ ಉಪ ನಿರ್ದೇಶಕರ ನೇತೃತ್ವದಲ್ಲಿ ಕಮಿಟಿ ಮಾಡಿ ಷೆಡ್ಯೂಲ್ ತಯಾರು ಮಾಡಲು ಕ್ರಮ |

| | | |
|---|---|---|
| | Balance shown under Sundry Debtors pertaining to Years 2003-04 to 2010-11 are not confirmed by the parties. Further, Sundry Debtors pertaining to Accounting years 2003-04 to 2007-08 amounting to Rs.2318.25 lakhs are barred by limitation of time and the company has made provision for doubtful debts, to extent of Rs.439.88 lakhs only. | ಕೈಗೊಳ್ಳಲಾಗುವುದು. ಈ ಕೆಲಸ ಮುಗಿದ ಮೇಲೆ ವ್ಯತ್ಯಾಸ ಮೊತ್ತವೇನಾದರೂ ಕಂಡು ಬಂದಲ್ಲಿ ಅದನ್ನು ಲೆಕ್ಕ ಮಾಡಲಾಗುವುದು.<br>The Company has been making provisions for amount receivable from EA which are pending for more than 5 years. Accordingly, the Company has made provision of Rs.254.62 lakhs pertains to Financial Year 2004-05 which was due for more than 5 years and Rs.185.26 lakhs amount receivable from Davanagere Municipal Corporation as per AG's quiry which is included in Rs.823.82 lakhs pertains to Financial Year 2005-06. The debts due is all from Government Departments and hence it is felt that it is not proper to make provision for the entire amount in a year, the efforts are made to constitute separate team to prepare individual Schedules headed by the Deputy Director of the respective divisions. On concluding of the same, the difference if any will be accounted accordingly. |
| 4 | ಸರ್ಕಾರ ಮತ್ತು ಸರ್ಕಾರೀ ಸಂಸ್ಥೆಗಳಲ್ಲಿರುವ ಠೇವಣಿಗಳು ಸೇರಿದಂತೆ ಸಾಲಗಳು ಮತ್ತು ಮುಂಗಡಗಳನ್ನು ಸ್ಥಿರೀಕರಿಸಿ ಸಮರ್ಥಿಸಿಕೊಂಡಿಲ್ಲ. ಇತರರಿಗೆ (ಪ್ರಸಕ್ತ ಆಸ್ತಿ) ನೀಡಿರುವ ರೂ.1689.74 ಲಕ್ಷ ರೂಪಾಯಿಗೆ ಸಮನಾದ ಸಾಲಗಳ ಮತ್ತು ಮುಂಗಡಗಳ ಸಂಬಂಧದಲ್ಲಿ ತಹಲ್‌ವರೆಗೆ ಮರುಹೊಂದಾಣಿಕೆ ಮಾಡಿಲ್ಲ ಮತ್ತು ಅನುಸೂಚಿಗಳನ್ನು ಇಟ್ಟಿಲ್ಲ. ಇದರಲ್ಲಿ ಅನೇಕ ಹಳೆ ಬಾಕಿಗಳು ಸೇರಿವೆ. ಈ ಬಗ್ಗೆ ಪುನರ್ ಪರಿಶೀಲಿಸಿ ಅನುಸರಣಾ ಕ್ರಮ ಕೈಗೊಳ್ಳುವ ಅಗತ್ಯವಿದೆ. ವಸೂಲಿ ಮಾಡಬೇಕಾದ ಸಾಲಗಳು ಮತ್ತು ಅದರ ಮುಂಗಡಗಳನ್ನು ಖಚಿತವಾಗಿ ತಿಳಿಸದಿರುವುದರಿಂದ, ಕಂಪನಿಯ ಲಾಭ/ ನಷ್ಟದ ಮೇಲೆ ಆಗುವ ಅದರ ಸಾಕ್ಷೇಪ ಪರಿಣಾಮವನ್ನು ಖಚಿತವಾಗಿ ಹೇಳಲಾಗುವುದಿಲ್ಲ.<br>Loans and advances including deposits with Government and public bodies are not supported by confirmation. Reconciliation and schedules in respect of loans and advances to others (current assets) amounting to Rs.1689.74 lakhs are not updated. This includes several old balances, which needs review and follow-ups. In the absence of ascertainment of recoverable debts and advances thereof, the relative impact of the same on the profit/loss of the company is not ascertainable. | ಆಯಾ ವಿಭಾಗಗಳ ಉಪ ನಿರ್ದೇಶಕರ ನೇತೃತ್ವದಲ್ಲಿ ಪ್ರತ್ಯೇಕ ಅನುಸೂಚಿಗಳನ್ನು ಸಿದ್ಧಪಡಿಸಲು ಪ್ರತ್ಯೇಕ ತಂಡವೊಂದನ್ನು ರಚಿಸಲು ಪ್ರಯತ್ನಗಳನ್ನು ಮಾಡಲಾಗಿದೆ. ಅದನ್ನು ಪೂರೈಸಿದ ಮೇಲೆ, ವ್ಯತ್ಯಾಸಗಳೇನಾದರೂ ಇದ್ದಲ್ಲಿ, ಅದನ್ನು ತದನುಸಾರವಾಗಿ ಲೆಕ್ಕಹಾಕಲಾಗುವುದು.<br>The efforts are made to constitute a separate team to prepare individual schedules headed by Deputy Director of the respective divisions. On concluding of the same, the difference, if any, will be accounted accordingly. |
| 5 | ರೂ. 900.62 ಲಕ್ಷ ರೂಪಾಯಿಗೆ ಸಮನಾದ ಸಣ್ಣಪುಟ್ಟ ಸಾಲಗಾರರಿಂದ ಸಂಗ್ರಹಿಸಿದ ಮೊತ್ತ ಮತ್ತು ಇತರ ಗ್ರಾಹಕರಿಂದ ಸಂಗ್ರಹಿಸಿದ ಮುಂಗಡ ಹಣ ಠೇವಣಿಯು ಸ್ಥಿರೀಕರಣಕ್ಕೆ ಮತ್ತು ಮರುಹೊಂದಾಣಿಕೆಗೆ ಒಳಪಟ್ಟಿದೆ. ಮೇಲೆ ಹೇಳಿರುವುದಕ್ಕೆ ಸಂಬಂಧಿಸಿದಂತೆ ಅನುಸೂಚಿಗಳನ್ನು ತಹಲ್‌ವರೆಗೆ ಇಟ್ಟಿಲ್ಲ.<br>Sundry Creditors and EMD collected from other parties amounting to Rs.900.62 lakhs is subject to confirmation and reconciliation. Schedules in respect of above are not updated. | ಸಣ್ಣಪುಟ್ಟ ಸಾಲಗಾರರ ಮೊತ್ತ, ಎಸ್.ಡಿ ಫರ್ಮ್‌ಗಳು, ಮುಂಗಡ ಹಣ ಠೇವಣಿ ಮುಂತಾದವುಗಳನ್ನು ಮರುಹೊಂದಾಣಿಕೆ ಮಾಡಲು ಎಲ್ಲಾ ಪ್ರಯತ್ನಗಳನ್ನು ಆಡಳಿತ ವರ್ಗವು ಮಾಡುತ್ತಿದೆ ಮತ್ತು ಮರುಹೊಂದಾಣಿಕೆಯ ಕಾರ್ಯವನ್ನು ಪೂರೈಸಿದ ತರುವಾಯ ಸರಿಯಾದ ಬಾಕಿ ಮೊತ್ತಗಳನ್ನು ಲೆಕ್ಕಪುಸ್ತಕಗಳಲ್ಲಿ ತೋರಿಸಲಾಗುವುದು.<br>The Management is making all efforts to reconcile the Sundry Creditors, S.D. Firms, EMD, etc., and on completion of reconciliation work, correct balance will be reflected in the books of Accounts. |

| | | |
|---|---|---|
| 6 | ಸಣ್ಣಪುಟ್ಟ ಸಾಲಗಾರರು, ಇತರ ಹೊಣೆಗಾರಿಕೆಗಳು, ಮುಂ.ಹ.ಠೇ, ಮುಂಗಡಗಳ ಸಂಬಂಧದಲ್ಲಿ, ನಗದುರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ವಸೂಲಿಯಾಗಬೇಕಾದ ಗ್ರಾಹಕವಾರು ಬಾಕಿ ಮೊತ್ತ ಮತ್ತು ಠೇವಣಿಗಳು ಲಭ್ಯವಿರುವುದಿಲ್ಲ. ಈ ಲೆಕ್ಕಗಳಲ್ಲಿ ಅನೇಕ ಬಾಬ್ತುಗಳಲ್ಲಿ ದೀರ್ಘಾವಧಿಯಿಂದ ಬರಬೇಕಾದ ಬಾಕಿ ಮೊತ್ತಗಳು ಸೇರಿವೆ. ಅದನ್ನು ಗ್ರಾಹಕವಾರು ವಿವರಗಳು / ವಿಂಗಡಣೆಗಳೊಂದಿಗೆ ಪುನರ್ ಪರಿಶೀಲಿಸುವವರೆಗೆ ಏರ್ಪಾಡುಗಳನ್ನು, ಅಗತ್ಯವಿರುವ ಹೊಂದಾಣಿಕೆಗಳು ಯಾವುದಾದರೂ ಇದ್ದರೆ ಅವುಗಳನ್ನು ಮಾಡಿಲ್ಲ. ಅಲ್ಲದೆ ಶೀರ್ಷಿಕೆಗಳ ಅಡಿಯಲ್ಲಿನ ಬಾಕಿಗಳು, ಕೆಲವು ಗ್ರಾಹಕರ ಖರ್ಚುಶಿಲ್ಕುಗಳನ್ನು ಇತರ ಗ್ರಾಹಕರ ಜಮಾ ಶಿಲ್ಕುಗಳಲ್ಲಿ, ಹಾಗೆಯೇ ಕೆಲವು ಗ್ರಾಹಕರ ಜಮಾ ಶಿಲ್ಕುಗಳಲ್ಲಿ ಇತರ ಗ್ರಾಹಕರ ಖರ್ಚು ಶಿಲ್ಕುಗಳನ್ನು ತೋರಿಸಿರುವುದರಿಂದ, ಮತ್ತು ಜಮಾ ಖರ್ಚು ಪಟ್ಟಿಯಲ್ಲಿ, ಸಂದಾಯವಾಗಬೇಕಾದ / ವಸೂಲಿಯಾಗಬೇಕಾದ ಪ್ರಕಟಿಸುವ ಬಾಕಿಗಳಿಗೆ ಬದಲಾಗಿ ನಿವ್ವಳ ಬಾಕಿಗಳನ್ನು ತೋರಿಸಿರುವುದರಿಂದ ಸರಿಯಾದ ವಿವರವನ್ನು ನೀಡುವುದಿಲ್ಲ.<br><br>Party wise balance in respect of Sundry Creditors, other liabilities, EMD, Advance recoverable in cash or kind and deposits are not reconciled. Several items in these accounts include long term pending balances, which are to be reviewed with party-wise details/ breakup, recoverability and required provisions/ adjustments, if any are to be made. Since the debit balances pertaining to certain parties have been incorrectly adjusted against the balances of the certain sundry creditors accounts and vice versa and net balances are disclosed in the Balance Sheet instead of disclosing balance payable/recoverable. | ಮರುಹೊಂದಾಣಿಕೆಗೆ ಒಳಪಟ್ಟು, ಸಣ್ಣಪುಟ್ಟ ಸಾಲಗಾರರು, ಇತರ ಹೊಣೆಗಾರಿಕೆಗಳು ಮುಂ.ಹ.ಠೇ., ಮುಂಗಡಗಳು, ಇತ್ಯಾದಿಗಳಿಗೆ ಸಂಬಂಧಪಟ್ಟ ಅನುಸೂಚಿಗಳು ಲಭ್ಯವಿದೆ. ಮೇಲಿನ ಲೆಕ್ಕ ಶೀರ್ಷಿಕೆಯನ್ನು ಹೊಂದಾಣಿಕೆ ಮಾಡಲು ಮಂಡಳಿಯು ಪ್ರಯತ್ನಿಸುತ್ತಿದೆ.<br><br>Schedules are available for Sundry Creditor, other liabilities, EMD, advances, etc., subject to reconciliation. The Management is making all efforts to reconcile the above head of accounts. |
| 7 | 2008–09ರ ಕರ್ನಾಟಕ ಸರ್ಕಾರದ ಆದೇಶದ ಆಧಾರದ ಮೇಲೆ ಕರ್ನಾಟಕ ಸರ್ಕಾರಕ್ಕೆ ಗ್ಯಾರಂಟಿ ಕಮೀಷನ್ ಆಗಿ ರೂ.51.86 ಲಕ್ಷಗಳನ್ನು ಪಾವತಿಸಿದ್ದು, ಇದನ್ನು ಕಂಪನಿಯು ಪ್ರಸಕ್ತ ಸಾಲಿನಲ್ಲಿ ವೆಚ್ಚವೆಂದು ಗುರುತಿಸಿಲ್ಲ.<br><br>During the year the Company has not recognized an expenses of Rs.51.86 lakhs as payable to Government of Karnataka for Guarantee Commission – based on a order pertains to 2008-09 from Government of Karnataka. | ಸರ್ಕಾರದ ಆದೇಶದ ದಿನಾಂಕ 29.03.2010ರ ಆಧಾರದ ಮೇಲೆ ಕಂಪನಿಯು 2010–11ನೇ ಸಾಲಿನಲ್ಲಿ ಸರ್ಕಾರಕ್ಕೆ ಕೊಡಬೇಕಾದ ಗ್ಯಾರಂಟಿ ಕಮೀಷನ್ ರೂ.51.86 ಲಕ್ಷಗಳನ್ನು ಲಾಭ ಮತ್ತು ನಷ್ಟ ತ:ಖ್ತೆಯಿಂದ ಹೊರಗಡೆ ಇರಿಸಲಾಗಿದೆ. ಇದಕ್ಕೆ ಕಾರಣವೆಂದರೆ ಸರ್ಕಾರದ ಪರವಾಗಿ ಕಂಪನಿಯ ಹೆಸರಿನಲ್ಲಿ ಸದರಿ ಸಾಲವನ್ನು ಪಡೆದಿರುವುದರಿಂದ ಕಂಪನಿಯು ಗ್ಯಾರಂಟಿ ಮೊತ್ತವನ್ನು ಬುಕ್ ಹೊಂದಾಣಿಕೆ ಮಾಡಲು ಅನುಮತಿ ನೀಡಿರುತ್ತದೆ.<br><br>The Company has booked Guarantee Commission for 2010-11 amounting to Rs.51.86 lakhs as its expenditure and shown outside the profit & loss account based on the Government order dated: 29.03.2010. Since, Government has agreed that the Corporation is not liable to pay Guarantee Commission on the loan borrowed on behalf of the Government. |

| | | |
|---|---|---|
| 8 | ನಿಗಮವು ಈ ಕೆಳಕಂಡ ದಾಯಿತ್ವವನ್ನು ಒದಗಿಸಿರುವುದಿಲ್ಲಾ:<br>ಅ) ನಮೂನೆ 240 ರ ವಾರ್ಷಿಕ ವಹಿವಾಟಿನ ಮತ್ತು ಪ್ರಗತಿಯಲ್ಲಿನ ಕಾಮಗಾರಿಗಳ ಮೊತ್ತದ ನಡುವೆ ಇರುವ ವ್ಯತ್ಯಾದಿಂದಾಗಿ ಮೌಲ್ಯಾಧಾರಿತ ತೆರಿಗೆಯ ದಾಯಿತ್ವದ ವ್ಯತ್ಯಾಸವನ್ನು ಕಂಡುಹಿಡಿಯಲಾಗಿಲ್ಲ ಮತ್ತು ಕಲ್ಪಿಸಿರುವುದಿಲ್ಲ. (ಉಲ್ಲೇಖ:ಕಂಡಿಕೆ 14 (ಎ) ರ ಅನುಸೂಚಿ 18).<br>ಆ) ಬಿಸಿಎಂ ವಿದ್ಯಾರ್ಥಿ ನಿಲಯದ ಕಾಮಗಾರಿಗಳಿಂದ ರೂ.37.68 ಲಕ್ಷಗಳಷ್ಟು ನಷ್ಟವಾಗಿರುತ್ತದೆ. (ಲಿಕ್ವಿಡೇಟೆಡ್ ಡ್ಯಾಮೇಜಸ್) (ಉಲ್ಲೇಖ: ಅನುಸೂಚಿ 18ರ ಕಂಡಿಕೆ–16).<br>ಇ) ನಿಗದಿತ ವೇಳೆಯಲ್ಲಿ ಜಬ್ಬಲ್‌ಪುರ ಯೋಜನೆಯ ಕಾಮಗಾರಿ ಪೂರ್ಣಗೊಳಿಸದಿದ್ದ ಕಾರಣದಿಂದಾಗಿ ಸಂದಾಯ ಮಾಡಿದ ರೂ.201.21 ಲಕ್ಷದಲ್ಲಿ ಇಎಂಡಿ, ಕಾರ್ಯಾಧಾರಿತ ಭದ್ರತಾ ಠೇವಣಿ ಕಾಮಗಾರಿ ವಹಿಸಿದ ಇಲಾಖೆಯಲ್ಲಿರುವ ಭದ್ರತಾ ಠೇವಣಿ, ಕಾಮಗಾರಿ ವಹಿಸಿದ ಇಲಾಖೆಯಲ್ಲಿರುವ ಹೆಚ್ಚುವರಿ ಭದ್ರತಾ ಠೇವಣಿಗಳನ್ನು ವಹಿಸಿಕೊಟ್ಟ ಪ್ರಾಧಿಕಾರ ಮುಟ್ಟುಗೋಲು ಹಾಕಿಕೊಂಡಿದೆ. (ಉಲ್ಲೇಖ: ಅನುಸೂಚಿ18ರ ಕಂಡಿಕೆ–17). ಮುಂದುವರೆದು ರೂ.511.51 ಲಕ್ಷಗಳ ಮುಂಗಡ ಹಣವನ್ನು ಗುತ್ತಿಗೆದಾರರು ಈ ವಿಭಾಗದ ಕಾಮಗಾರಿಗಳನ್ನು ನಿರ್ವಹಿಸಲು ಈ ಹಣವನ್ನು ವಿಸ್ತರಿಸಿದ್ದಾರೆ. ಕಾಮಗಾರಿಯು ಸ್ಥಗಿತಗೊಂಡು ನಷ್ಟ ಉಂಟಾಗಿರುತ್ತದೆ.<br>ಆದುದರಿಂದ, ಪ್ರಸಕ್ತ ಸಾಲಿನ ದಾಯಿತ್ವ ಲಾಭಾಂಶವು ಖಚಿತವಾಗಿಲ್ಲ. ಈ ಮೇಲಿನ ಕಂಡಿಕೆ 3 ಮತ್ತು 10ರಂತೆ ಕಡಿಮೆ ಅವಕಾಶ ಮತ್ತು ಹೆಚ್ಚಿನ ಆದಾಯವನ್ನು ಗುರುತಿಸಿ ಪಟ್ಟಿ ಮಾಡಿದೆ.<br>The company has not provided the following liabilities:<br>a. Due to difference in Turn over in Form No. 240 and Work in Progress submitted to head office VAT liability due to this difference has not been ascertained and provided for (Refer para 14(a) of schedule 18). | 31.12.2011ರೊಳಗೆ ವಾರ್ಷಿಕ ಸಲ್ಲಿಕೆ 240 ಅನ್ನು ಮೌಲ್ಯವರ್ಧಿತ ತೆರಿಗೆ ಪ್ರಾಧಿಕಾರಕ್ಕೆ ಸಲ್ಲಿಸಲು ಸಮಯವನ್ನು ನಿಗದಿ ಪಡಿಸಲಾಗಿದೆ. ಈ ಸಮಯಕ್ಕೆ ಲೆಕ್ಕಪತ್ರಗಳನ್ನು ಅಂತಿಮಗೊಳಿಸುವ ಸಂದರ್ಭದಲ್ಲಿ ಕೆಲವೊಂದು ವಿಭಾಗಗಳು ವ್ಯಾಟ್ 240 ಅನ್ನು ಸಲ್ಲಿಸಿರುವುದಿಲ್ಲ. ವ್ಯಾಟ್ ಮೊತ್ತವನ್ನು ಪ್ರಾಧಿಕಾರದಲ್ಲಿ ವಾರ್ಷಿಕ ಸಲ್ಲಿಕೆ ಮಾಡಿದ ನಂತರ ಹೊಂದಾಣಿಕೆ ಮಾಡಲಾಗುವುದು. ಆದುದರಿಂದ ಈ ವ್ಯತ್ಯಾಸವನ್ನು ಗುರುತಿಸಲಾಗುವುದಿಲ್ಲ.<br>ಪ್ರಸಕ್ತ ಸಾಲಿನಲ್ಲಿ ಬಿ.ಸಿ.ಎಂ. ಇಲಾಖೆಯಿಂದ ರೂ.182.71 ಲಕ್ಷಗಳು ಬಾಕಿ ಇರುವ ಹಣವನ್ನು ಇಲ್ಲಿಯವರೆಗೆ ವಿಶ್ವಾಸದ ಮೇರೆಗೆ ಪಡೆದಿರುತ್ತದೆ. ಕಂಪನಿಯು ರೂ. 145.03 ಲಕ್ಷ ಬಾಕಿ ಹಣವನ್ನು ಇಲ್ಲಿಯವರೆಗೆ ಪಡೆದಿರುತ್ತದೆ. ರೂ.37.68 ಲಕ್ಷಗಳು ಬಾಕಿ ಇರುವ ಹಣವನ್ನು ಕಂಪನಿಯು ಒದಗಿಸಿರುವುದಿಲ್ಲ.<br>ಎನ್.ವಿ.ಡಿ.ಎ. ವಹಿಸಿದ ಕಾಮಗಾರಿಗಳನ್ನು ನಿಗದಿತ ಸಮಯಕ್ಕೆ ಪೂರ್ಣಗೊಳಿಸದೆ ಇರುವುದರಿಂದ ಇಎಂಡಿ ಮತ್ತು ಎಸ್‌ಡಿಯ ರೂ.201.21 ಲಕ್ಷಗಳನ್ನು ಮುಟ್ಟುಗೋಲು ಹಾಕಲಾಗಿದೆ. ಈ ವಿಷಯವನ್ನು ಮಧ್ಯಸ್ಥಿಕೆ ಮಾಡಲು ವಹಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಮಧ್ಯಸ್ಥಿಕೆಯಿಂದ ಅವಕಾಶ ಮಾಡುವುದು.<br>ನಂತರ ಅಧಿಕಾರಿಗಳ ನಿರಂತರ ಅನುಸರಣೆಯನ್ನು ಮಾಡಿ ಲೆಕ್ಕ ಪತ್ರಗಳ ಜೊತೆ ಅಂತಿಮ ಅಳತೆ ಪಡೆದಿರುತ್ತದೆ. ಯೋಜನಾಧಿಕಾರಿಗಳು ಲೆಕ್ಕಪತ್ರಗಳನ್ನು ಪಡೆದ ನಂತರ, ಪರಿಶೀಲಿಸಿ ಮುಂಗಡ ಹಣಕ್ಕೆ ಅನುಗುಣವಾಗಿ ಹೊಂದಾಣಿಕೆ ಮಾಡಲಾಗುವುದು. ಅಂತಿಮ ಬಿಲ್ಲುಗಳ ಇತ್ಯರ್ಥಗೊಂಡ ನಂತರ ಅವಶ್ಯಕತೆ ಇದ್ದರೆ ಲೆಕ್ಕಪತ್ರದಲ್ಲಿ ವ್ಯವಸ್ಥೆ ಮಾಡಲಾಗುವುದು.<br>VAT authority has given time limit upto 31.12.2011 for filing VAT annual return in Form-240. By the time accounts are finalized some of the projects have not filed Form-240. VAT payable is subject to reconciliation with the annual return filed with VAT authorities. Hence, difference if any is not ascertainable. |
| | b. Liquidated damages of BCM Hostel project Rs.37.68 lakhs (Refer para 16 of schedule 18). | Out of the total amount of Rs.182.71 lakhs due from M/s.BCM Department, the Company has received Rs.145.03 lakhs till date and confident of receiving the balance amount. Hence, the Company has not provided for the balance amount of Rs.37.68 lakhs. |
| | c. Payment made towards EMD, Performance security deposit, security deposit with EA, Additional security deposit with EA during the year 2005, which has been forfeited by EA for Jabalpur Project Rs.201.21 lakhs (Refer para 17 of Schedule 18) & further a advance of Rs.511.51 lakhs was extended to the contractor to carryout the works for this project has been absconding, however company has not provided for both the above losses.<br>Hence, Profit for the year is over stated to the extent of liability not ascertain, short provision and excess income recognization as listed in para 3 to 10 above. | NVDA has forfeited EMD and SD of Rs.201.21 lakhs for non completion of work in scheduled time. The matter has been referred to Arbitration.<br>The necessary provision will be made in the year of settlement of Arbitration.<br>After continuous persuasions, the project incharge officers have rendered accounts with final measurements. The account submitted by the officers have been under scrutiny and will be adjusted against the advance due from the project executives. After settlement of the final bills from NVDA, required provision will be made in the books of accounts. |

| | | |
|---|---|---|
| 9 | ಕಂಪನಿಯ ವಿರುದ್ಧವಾಗಿ 103 ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುತ್ತದೆ. ಈ ಪ್ರಕರಣಗಳಿಗೆ ಸಂಬಂಧಪಟ್ಟ ಮೊತ್ತದ ಮತ್ತು ದಾಯಿತ್ವದ ಬಗ್ಗೆ ಮಾಹಿತಿಯನ್ನು ಒದಗಿಸಿರುವುದಿಲ್ಲ. ಈ ಪ್ರಕರಣಗಳು ಕೈ ಬಿಟ್ಟ ಸಂದರ್ಭದಲ್ಲಿ ಇದರಿಂದ ಯಾವುದೇ ರೀತಿಯ ಪರಿಣಾಮ ಉಂಟಾಗುವುದಿಲ್ಲ. ಇದರ ಪರಿಣಾಮವಾಗಿ ಸಾದಿಲ್ವಾರು ದಾಯಿತ್ವಗಳು ಲೆಕ್ಕಪತ್ರಗಳ ಟಿಪ್ಪಣಿಯಲ್ಲಿ ಉಳಿದಿರುತ್ತದೆ.<br>There are about 103 cases have been filed against the company are pending, in various courts, company has not provided the information on the amount involved in these cases & the amount of liability which may arise in the event of company loosing these cases have not been quantified. Consequently contingent liability amount stated in the notes on accounts has been understated to this extent. | ಸೇವಾ ವಿಷಯಕ್ಕೆ ಸಂಬಂಧಿಸಿದಂತೆ ಕಂಪನಿಯ ವಿರುದ್ಧ ಹೆಚ್ಚಿನ ಪ್ರಕರಣಗಳನ್ನು ನೌಕರರು ಹೂಡಿರುತ್ತಾರೆ. ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ಪ್ರಕರಣಗಳು ತೀರ್ವಾನವಾಗಿರುತ್ತದೆ. ದಾಯಿತ್ವವನ್ನು ಕಂಪನಿಯು ಗುರುತಿಸಲಾಗಿರುವುದಿಲ್ಲ. ಕಂಪನಿಯ ಪ್ರಮಾಣಕ್ಕೆ ಹೋಲಿಸಿದಾಗ ದಾಯಿತ್ವದ ಪ್ರಮಾಣ ಅತ್ಯಲ್ಪವಾಗಿರುತ್ತದೆ.<br>Most of the cases are pertaining to cases filed by the employees against the company in service matters. Unless the cases are decided in the respective courts, the liability to the company cannot be ascertained. Considering the volume of the company, the probable liability on this account is not material in nature. |
| 10 | 31.3.2011ರಂದು ಇದ್ದಂತೆ, ಕೆಲಸ ಬಾಕಿ ಇರುವ ಹೊಂದಾಣಿಕೆಗಳ ಮೌಲ್ಯ ರೂ.983.12 ಕೋಟಿ ರೂಪಾಯಿ ಮತ್ತು ಈ ಮೊತ್ತವನ್ನು ಚಾಲ್ತಿ ಸ್ವತ್ತುಗಳಲ್ಲಿ ಸೇರಿಸಲಾಗಿದೆ. 31.3.2011ರಂದು ಇದ್ದಂತೆ ಕೆಲಸ ವಹಿಸಿರುವ ಏಜೆನ್ಸಿಗಳಿಂದ ಬಾಕಿ ಇರುವ ಮೊತ್ತ 1399.91 ಕೋಟಿ ರೂಪಾಯಿ ಮೊತ್ತವನ್ನು ಚಾಲ್ತಿ ಹೊಣೆಗಾರಿಕೆಗಳಲ್ಲಿ ಸೇರಿಸಲಾಗಿದೆ. ಕೆಲಸ ವಹಿಸುವ ಏಜೆನ್ಸಿಗಳಿಂದ ಸ್ವೀಕರಿಸಿರುವ ಮೊತ್ತಕ್ಕೆ ಸಂಬಂಧಿಸಿದಂತೆ ಗ್ರಾಹಕವಾರು ಅನುಸೂಚಿಗಳ ಹೊಂದಾಣಿಕೆಯಾಗಬೇಕಿರುತ್ತದೆ. ಗ್ರಾಹಕವಾರು ಅನುಸೂಚಿಗಳಿಲ್ಲದೆ, ಜಮಾ ಖರ್ಚುಪಟ್ಟಿಯಲ್ಲಿ ತೋರಿಸಿರುವ ಬಾಕಿಯನ್ನು ಪರಿಶೀಲಿಸಲಾಗುವುದಿಲ್ಲ. ಕೆಲವು ಪ್ರಕರಣಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು/ ಕಾಲಕಾಲಕ್ಕೆ ಕೆಲಸ ವಹಿಸುವ ಏಜೆನ್ಸಿಗಳಿಗೆ ಒಪ್ಪಿಸಿದ್ದರೂ, ಆನುಷಂಗಿಕ ಹೊಂದಾಣಿಕೆಗಳನ್ನು ಲೆಕ್ಕಪುಸ್ತಕಗಳಲ್ಲಿ ನಮೂದಿಸಿಲ್ಲ.<br>Rs.983.12 crores is the Value of Work Pending Adjustments as on 31.03.2011 and this amount is included in the Current Assets. Amount received from Entrusting Agencies is Rs.1399.91 crores as on 31.03.2011 and this amount is included in Current Liabilities. Party wise Schedules are yet to be reconciled and confirmation to be received from Entrusting Agencies. Pending this, balances shown in Balance Sheet are not verifiable. Though in certain cases the work has been completed the job/handover to Entrusting Agencies from time to time, consequential adjustments are not effected in the books of account. Non-Adjustments of the accounts resulted in over statement of Current Assets and Current Liabilities. The amount of such over statement and resultant impact, if any, on the Profit and Loss Account cannot be ascertained. | ಗ್ರಾಹಕವಾರು ಅನುಸೂಚಿಗಳು ಹೊಂದಾಣಿಕೆಗೆ ಬಾಕಿಯಿರುವ ಕಾಮಗಾರಿಗಳ ರೂ.983.12 ಕೋಟಿ ರೂಪಾಯಿಗಳಿಗಾಗಿ ಹಾಗೂ ಕೆಲಸ ವಹಿಸುವ ಏಜೆನ್ಸಿಗಳಿಂದ ಸ್ವೀಕೃತವಾದ ಮೊತ್ತವು ರೂ.1399.91 ಕೋಟಿ ಕೇಂದ್ರ ಕಛೇರಿಯಲ್ಲಿ ಲಭ್ಯವಿರುತ್ತದೆ. ಎಂದರೆ ಮರುಹೊಂದಾಣಿಕೆಯ ಅಡಿಯಲ್ಲಿ 31.03.2011ರಂದು ಇದ್ದಂತೆ ಹೊಂದಾಣಿಕೆ ಮಾಡಬೇಕಾದ ಕಾಮಗಾರಿಗಳ ಬಗೆಗಿನ, ಅನುಸೂಚಿಗಳು ಕಂಪನಿಯಲ್ಲಿ ಕೂಡಲೇ ದೊರಕುತ್ತವೆ. ಅದನ್ನು ಮುಂಬರುವ ವರ್ಷಗಳಲ್ಲಿ ಹೊಂದಾಣಿಕೆ ಮಾಡಲಾಗುವುದು.<br>ಹಿಂದಿನ ವರ್ಷದಲ್ಲಿ ನಿರ್ವಹಿಸಲಾದ ರೂ.346.06 ಕೋಟಿ ರೂಪಾಯಿಗಳಿಗೆ ಅನುಗುಣವಾಗಿ ಕಂಪನಿಯು 2010–11 ರಲ್ಲಿ ನಿರ್ವಹಿಸಿದ ಕಾಮಗಾರಿಗಳ ಮೊತ್ತ ರೂ.226.10 ಕೋಟಿ ರೂ.ಗಳಷ್ಟನ್ನು ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಮುಂಬರುವ ವರ್ಷಗಳಲ್ಲಿ ಬಾಕಿ ಇರುವ ಎಲ್ಲಾ ಪ್ರಗತಿಯಲ್ಲಿರುವ ಕಾಮಗಾರಿಗಳ ಹೊಂದಾಣಿಕೆಯನ್ನು ಪೂರ್ಣಗೊಳಿಸುವ ವಿಶ್ವಾಸವನ್ನು ಕಂಪನಿಯು ಹೊಂದಿರುತ್ತದೆ.<br>Party wise schedule for value of work pending adjustment of Rs.983.12 crore and amount received from entrusting agency of Rs.1399.91 crore is readily available in Hqrs., i.e., in respect of works which are to be adjusted as on 31.03.2011 under reconciliation. The same will be adjusted in the coming years.<br>The Company has adjusted value of work done to the extent of Rs.346.06 crore in the financial year 2010-11 as against Rs.226.10 crore in the previous year. Company is confident of completing all the pending WIP adjustments in the coming years. |

ಸಹಿ/–
(ಸಿ.ಕೆ. ಶಿವಣ್ಣ)
ವ್ಯವಸ್ಥಾಪಕ ನಿರ್ದೇಶಕರು

**Sd/-**
**(C.K. SHIVANNA)**
**Managing Director**

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್ ಇದರ ಸದಸ್ಯರಿಗೆ ಲೆಕ್ಕಪರಿಶೋಧಕರ ವರದಿ

# AUDITORS REPORT TO THE MEMBERS OF KARNATAKA RURAL INFRASTRUCTURE DEVELOPMENT LIMITED

2011ರ ಮಾರ್ಚ್ 31ರಂದು ಇದ್ದಂತೆ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಇದರ ಜಮಾ ಖರ್ಚು ಪಟ್ಟಿಯ ಮತ್ತು ಅದಕ್ಕೆ ಲಗತ್ತಿಸಲಾದ ಆ ದಿನಾಂಕಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟ ಲೆಕ್ಕದ ಮತ್ತು ಆ ದಿನಾಂಕದಂದು ಕೊನೆಗೊಂಡ ವರ್ಷಕ್ಕೆ ನಗದು ಸ್ವೀಕೃತಿಯ ವಿವರಪಟ್ಟಿಯ ಲೆಕ್ಕಪರಿಶೋಧನೆಯನ್ನು ನಾವು ಮಾಡಿದ್ದೇವೆ. ಈ ಹಣಕಾಸು ವಿವರಪಟ್ಟಿಗಳು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ನಮ್ಮ ಲೆಕ್ಕ ಪರಿಶೋಧನೆಯನ್ನು ಆಧರಿಸಿ ಈ ಹಣಕಾಸು ವಿವರಣ ಪಟ್ಟಿಗಳ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿ.

1. ನಾವು ಲೆಕ್ಕ ಪರಿಶೋಧನೆಯನ್ನು ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಿಕೊಳ್ಳಲಾದ ಲೆಕ್ಕಪರಿಶೋಧನಾ ಮಾನದಂಡಗಳಿಗನುಸಾರವಾಗಿ ಮಾಡಿದ್ದೇವೆ. ಈ ಮಾನದಂಡಗಳ ಪ್ರಕಾರ ಹಣಕಾಸು ವಿವರಣ ಪಟ್ಟಿಗಳು ಮುಖ್ಯ ತಪ್ಪು ಹೇಳಿಕೆಗಳಿಂದ ಮುಕ್ತವಾಗಿದೆ ಎಂಬ ಬಗ್ಗೆ ಮುಕ್ತ ಭರವಸೆ ಪಡೆಯುವ ರೀತಿಯಲ್ಲಿ ಲೆಕ್ಕಪರಿಶೋಧನೆಯನ್ನು ಯೋಚಿಸಿ ಮಾಡಬೇಕಾಗುತ್ತದೆ. ಪರೀಕ್ಷಾರ್ಥ ಆಧಾರದ ಮೇಲೆ ಹಣಕಾಸು ವಿವರಣ ಪಟ್ಟಿಗಳಲ್ಲಿನ ಮೊಬಲಗುಗಳು ಮತ್ತು ವಿವರಣೆಗಳನ್ನು ಬೆಂಬಲಿಸುವ ಸಾಕ್ಷ್ಯಗಳನ್ನು ಪರೀಕ್ಷಿಸುವುದನ್ನು ಲೆಕ್ಕಪರಿಶೋಧನೆ ಒಳಗೊಳ್ಳುತ್ತದೆ. ಲೆಕ್ಕ ಪರಿಶೋಧನೆಯು, ಆಡಳಿತ ವರ್ಗವು ಬಳಸಿದ ಲೆಕ್ಕನಿರ್ವಹಣಾ ತತ್ವಗಳ ಮತ್ತು ಮುಖ್ಯ ಅಂದಾಜುಗಳ ಮೌಲ್ಯಮಾಪನ ಹಾಗೂ ಒಟ್ಟಾರೆ ಹಣಕಾಸು ವಿವರಣ ಪಟ್ಟಿಗಳ ಮೌಲ್ಯಮಾಪನವನ್ನು ಒಳಗೊಳ್ಳುತ್ತದೆ. ನಾವು ನೀಡಿರುವ ಅಭಿಪ್ರಾಯಕ್ಕೆ ನಾವು ನಡೆಸಿರುವ ಲೆಕ್ಕಪರಿಶೋಧನೆ ಆಧಾರವನ್ನು ಒದಗಿಸುತ್ತದೆ ಎಂದು ನಾವು ಭಾವಿಸಿದ್ದೇವೆ.

2. ಕಂಪನಿಗಳ ಅಧಿನಿಯಮ 1956ರ 227ನೇ ಪ್ರಕರಣದ 4(ಎ) ಉಪಪ್ರಕರಣದ ನಿಬಂಧನೆಗಳಿಗನುಸಾರ ಭಾರತ ಸರ್ಕಾರವು ಹೊರಡಿಸಿದ ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ 2003ರ ಮೂಲಕ ಅಗತ್ಯಪಡಿಸಲಾದಂತೆ ಸದರಿ ಆದೇಶದ 4 ಮತ್ತು 5ನೇ ಕಂಡಿಕೆಗಳಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳ ಬಗ್ಗೆ ಒಂದು ವಿವರಣಪಟ್ಟಿಯನ್ನು ಅನುಬಂಧ 1ರಲ್ಲಿ ಲಗತ್ತಿಸಲಾಗಿದೆ.

3. ***ಆದಾಯ ಗುರುತಿಸುವುದು:*** *ಕಾಮಗಾರಿಗಳು ಶೇಕಡವಾರು ಪೂರ್ಣಗೊಂಡಂತೆ ನಿಗಮದ ಆದಾಯವನ್ನು AS-7 ವಿಧಾನದ ಆಧಾರದ ಮೇರೆಗೆ ಗುರುತಿಸಲಾಗುವುದು. ದರ ಪಟ್ಟಿಯ ದರದಂತೆ ನಿರ್ವಹಿಸಿದ ಮೌಲ್ಯದ ಕಾಮಗಾರಿಗಳನ್ನು ಹೊರತುಪಡಿಸಿ, ನಿಗಮದ ಸೇವಾ ಶುಲ್ಕವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಪ್ರಸಕ್ತ ವರ್ಷದ ಆದಾಯದಲ್ಲಿ ವ್ಯತ್ಯಾಸವನ್ನು ಗುರುತಿಸಲಾಗಿದ್ದು, ಅದನ್ನು ಸಮರ್ಥಿಸಿಕೊಳ್ಳಲಾಗಲಿಲ್ಲ.*

4. *ಹಾನಿಗೊಂಡ ಆಸ್ತಿಗಳ ಬಗ್ಗೆ ಅವಲೋಕನವನ್ನು ಮಾಡಿದಾಗ ಇದರ ಬಗ್ಗೆ ಕಂಪನಿಯು ಯಾವುದೇ ಕಾರ್ಯನೀತಿಯನ್ನು ರಚಿಸಿರುವುದಿಲ್ಲ. ತತ್ಪರಿಣಾಮವಾದ ಹಾನಿಯಿಂದ ಲೆಕ್ಕಪತ್ರದಲ್ಲಿ ನಷ್ಟ ಉಂಟಾಗುತ್ತದೆ. ಆದ್ದರಿಂದ, ಸ್ಥಿರಾಸ್ತಿಗಳನ್ನು ಅಧಿಕವಾಗಿ ಗುರುತಿಸಲಾಗಿದೆ.*

We have audited the Balance sheet of KARNATAKA RURAL INFRASTRUCTURE DEVELOPMENT LIMITED AS AT March 31, 2011 and the Profit and Loss account for the year ended as on that date annexed thereto and Cash Flow Statement for the year ended on that date. These financial statements are the responsibility of the Company's management. Our responsibility is to express an opinion on these financial statements based on our audit.

1. We conducted our audit in accordance with auditing standards generally accepted in India. Those standards require that we plan and perform the audit to obtain reasonable assurance about whether the financial statements are free of material mis-statement. An audit includes examining on a test basis, evidence supporting the amounts and disclosures in the financial statements. An audit also includes assessing the accounting principles used and significant estimates made by the management, as well as evaluating the overall financial statement presentation. we believe that our audit provides a reasonable basis for our opinion.

2. As required by the Companies (Auditors Report) Order 2003, issued by the Government of India in terms of sub-section (4A) of section 227 of the companies Act, 1956, we enclose in the Annexure I hereto a statement in the matters specified in paragraphs 4 and 5 of the said Order.

3. ***Revenue Recognition :*** *The Company Recognizes the revenue based on percentage of completion method as per AS-7 except in the case of value of work done at SR rates where only Company's charges is recognized. Consequently there could be difference in revenue recognition during the year which is not ascertainable.*

4. *The Company has not formed policy to review the impairment of assets held, consequently loss on account of impairment if any, is not quantified by the company. Hence Fixed Assets might be overstated to that extent.*

5. 2003–04 ರಿಂದ 2010–11ರವರೆಗಿನ ವರ್ಷಗಳಿಗೆ ಸಂಬಂಧಪಡುವ ಚಿಲ್ಲರೆ ಸಾಲಿಗರ ಶೀರ್ಷಿಕೆಯ ಅಡಿಯಲ್ಲಿ ಇರುವ ಶಿಲ್ಕುಗಳನ್ನು ಪಕ್ಷಕಾರರು (ಪಾರ್ಟಿಗಳು) ಸ್ಥಿರೀಕರಿಸಿಲ್ಲ. ಅಲ್ಲದೆ, 2003–04 ರಿಂದ 2006–07ನೇ ಸಾಲಿನವರೆಗೆ ರೂ.2318.25 ಲಕ್ಷ ರೂಪಾಯಿಗಳ ಲೆಕ್ಕವು ಅವಧಿ ಪರಿಮಿತಿಯಿಂದ ಪ್ರತಿಬಂಧಿತವಾಗಿದೆ ಮತ್ತು ಸಂಶಯಾಸ್ಪದ ಸಾಲ ಯಾವುದೇ ಇದ್ದರೆ, ಆ ಬಗ್ಗೆ ಕಂಪನಿಯು ಯಾವುದೇ ಏರ್ಪಾಡು ಮಾಡಿಲ್ಲ, ರೂ.439.88 ಲಕ್ಷಗಳು ಮಾತ್ರ ಮಾಡಲಾಗಿದೆ.

6. ಸರ್ಕಾರದಲ್ಲಿ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ಠೇವಣಿಗಳೂ ಒಳಗೊಂಡಂತೆ ಸಾಲಗಳು ಮತ್ತು ಮುಂಗಡಗಳನ್ನು ಸ್ಥಿರೀಕರಿಸಿ ಸಮರ್ಥಿಸಿಲ್ಲ. (ಪ್ರಸಕ್ತ ಸ್ವತ್ತುಗಳು) ರೂ.1689.74 ಲಕ್ಷ ರೂಪಾಯಿಗಳ ಮೊತ್ತದ 'ಇತರರಿಗೆ ಸಾಲಗಳು ಮತ್ತು ಮುಂಗಡಗಳ' ಸಂಬಂಧದಲ್ಲಿ, ಮರು ಹೊಂದಾಣಿಕೆ ಮತ್ತು ಅನುಸೂಚಿಗಳನ್ನು ಇಂದಿನವರೆಗೆ ಪೂರ್ಣಗೊಳಿಸಿಲ್ಲ. ಇದರಲ್ಲಿ ಹಳೆಯ ಶಿಲ್ಕುಗಳು ಒಳಗೊಂಡಿದೆ. ಇದಕ್ಕಾಗಿ ಪರಿಶೀಲನೆ ಮತ್ತು ಅನುಸರಣಾ ಕ್ರಮಕೈಗೊಳ್ಳಬೇಕಾಗಿದೆ. ವಸೂಲ್ಮಾಡಬೇಕಾಗಿದ್ದ ಸಾಲಗಳು ಮತ್ತು ಮುಂಗಡಗಳನ್ನು ಖಚಿತಪಡಿಸಿಲ್ಲದಿರುವುದರಿಂದ ಕಂಪನಿಯ ಲಾಭ/ನಷ್ಟದ ಮೇಲಾಗುವ ಅದರ ಸಾಪೇಕ್ಷ ಪರಿಣಾಮವನ್ನು ಖಚಿತಪಡಿಸಲಾಗುವುದಿಲ್ಲ.

7. ಚಿಲ್ಲರೆ ಸಾಲಿಗರಿಂದ ಮತ್ತು ಇತರ ಪಕ್ಷಕಾರರಿಂದ ಸಂಗ್ರಹಿಸಿದ ಮುಂಗಡ ಠೇವಣಿ (ಇ.ಎಂ.ಡಿ.) ರೂ.900.62 ಲಕ್ಷ ರೂಪಾಯಿಗಳಷ್ಟಾಗುತ್ತಿದ್ದು, ಅದನ್ನು ಸ್ಥಿರೀಕರಿಸಬೇಕಾಗಿದೆ ಮತ್ತು ಮರು ಹೊಂದಾಣಿಕೆಗೊಳಪಡಿಸಬೇಕಾಗಿದೆ. ಮೇಲ್ಕಂಡ ಲೆಕ್ಕಗಳ ಬಗ್ಗೆ ಅನುಸೂಚಿಗಳನ್ನು ಇಂದಿನವರೆಗೆ ಪೂರ್ಣಗೊಳಿಸಿಲ್ಲ.

8. ಸಣ್ಣಪುಟ್ಟ ಸಾಲಗಾರರು, ಇತರೆ ಹೊಣೆಗಾರಿಕೆಗಳು, ಮುಂ.ಹ.ಠೇ., ಮುಂಗಡಗಳ ಸಂಬಂಧದಲ್ಲಿ, ನಗದು ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ವಸೂಲಿಯಾಗಬೇಕಾದ ಗ್ರಾಹಕವಾರು ಬಾಕಿ ಮೊತ್ತ ಮತ್ತು ಠೇವಣಿಗಳು ಲಭ್ಯವಿರುವುದಿಲ್ಲ. ಈ ಲೆಕ್ಕಗಳಲ್ಲಿ ಅನೇಕ ಬಾಬ್ತುಗಳಲ್ಲಿ ದೀರ್ಘಾವಧಿಯಿಂದ ಬರಬೇಕಾದ ಬಾಕಿ ಮೊತ್ತಗಳು ಸೇರಿವೆ. ಅದನ್ನು ಗ್ರಾಹಕವಾರು ವಿವರಗಳು/ವಿಂಗಡಣೆಗಳೊಂದಿಗೆ ಪುನರ್ ಪರಿಶೀಲಿಸುವವರೆಗೆ ಏರ್ಪಾಡುಗಳನ್ನು, ಅಗತ್ಯವಿರುವ ಹೊಂದಾಣಿಕೆಗಳು ಯಾವುದಾದರೂ ಇದ್ದರೆ ಅವುಗಳನ್ನು ಮಾಡಿಲ್ಲ. ಅಲ್ಲದೆ ಶೀರ್ಷಿಕೆಗಳ ಅಡಿಯಲ್ಲಿನ ಬಾಕಿಗಳು, ಕೆಲವು ಗ್ರಾಹಕರ ಜಮಾ ಶಿಲ್ಕುಗಳಲ್ಲಿ ಇತರ ಗ್ರಾಹಕರ ಖರ್ಚು ಶಿಲ್ಕುಗಳನ್ನು ತೋರಿಸಿರುವುದರಿಂದ, ಮತ್ತು ಜಮಾ ಖರ್ಚು ಪಟ್ಟಿಯಲ್ಲಿ, ಸಂದಾಯವಾಗಬೇಕಾದ/ವಸೂಲಿಯಾಗಬೇಕಾದ ಪ್ರಕಟಿಸುವ ಬಾಕಿಗಳಿಗೆ ಬದಲಾಗಿ ನಿವ್ವಳ ಬಾಕಿಗಳನ್ನು ತೋರಿಸಿರುವುದರಿಂದ ಸರಿಯಾದ ವಿವರಗಳನ್ನು ನೀಡುವುದಿಲ್ಲ.

9. 2008–09ರ ಕರ್ನಾಟಕ ಸರ್ಕಾರದ ಆದೇಶದ ಆಧಾರದ ಮೇಲೆ ಕರ್ನಾಟಕ ಸರ್ಕಾರಕ್ಕೆ ಗ್ಯಾರಂಟಿ ಕಮೀಷನ್ ಆಗಿ ರೂ.51.86 ಲಕ್ಷಗಳನ್ನು ಪಾವತಿಸಿದ್ದು, ಇದನ್ನು ಕಂಪನಿಯು ಪ್ರಸಕ್ತ ಸಾಲಿನಲ್ಲಿ ವೆಚ್ಚವೆಂದು ಗುರುತಿಸಿಲ್ಲ.

10. ನಿಗಮವು ಈ ಕೆಳಕಂಡ ದಾಯಿತ್ವವನ್ನು ಒದಗಿಸಿರುವುದಿಲ್ಲ:

ಅ) ನಮೂನೆ 240 ರ ವಾರ್ಷಿಕ ವಹಿವಾಟಿನ ಮತ್ತು ಪ್ರಗತಿಯಲ್ಲಿನ ಕಾಮಗಾರಿಗಳ ಮೊತ್ತದ ನಡುವೆ ಇರುವ ವ್ಯತ್ಯಾಸದಿಂದಾಗಿ ಮೌಲ್ಯಾಧಾರಿತ ತೆರಿಗೆಯು ದಾಯಿತ್ವದ ವ್ಯತ್ಯಾಸವನ್ನು ಕಂಡುಹಿಡಿಯಲಾಗಿಲ್ಲ ಮತ್ತು ಕಲ್ಪಿಸಿರುವುದಿಲ್ಲ. (ಉಲ್ಲೇಖ:ಕಂಡಿಕೆ 19 (ಬಿ) ರ ಅನಸೂಚಿ 19).

ಆ) ಬಿಸಿಎಂ ವಿದ್ಯಾರ್ಥಿ ನಿಲಯ ಕಟ್ಟಡದ ಕಾಮಗಾರಿಯಿಂದ ನಿರ್ಣೀತ ಹಾನಿಪೂರಣ (ಲಿಕ್ವಿಡೇಟೆಡ್ ಡಾಮೇಜಸ್) ರೂ.37.68 ಲಕ್ಷಗಳು [ಉಲ್ಲೇಖ ಅನುಸೂಚಿ–19ರ ಕಂಡಿಕೆ 16].

5. Balance shown under Sundry Debtors pertaining to years 2003-04 to 2010-11 are not confirmed by the parties. Further, Sundry Debtors pertaining to Accounting Years 2003-04 to 2007-08 amounting to Rs.2318.25 lakhs are barred by limitation of time and the company has made provision for doubtful debts to extent of Rs.439.88 lakhs only.

6. Loans and advances including deposits with Government and public bodies are not supported by confirmation. Reconciliation and schedules in respect of loans and advances to others ( current assets) amounting to Rs.1689.74 lakhs are not updated. This includes several old balances, which needs review and follow-ups. In the absence of ascertainment of recoverable debts and advances there of, the relative impact of the same on the profit/ loss of the company is not ascertainable.

7. Sundry Creditors and EMD collected from other parties amounting to Rs.900.62 lakhs is subject to confirmation and reconciliation. Schedules in respect of above are not updated.

8. Party wise balance in respect of Sundry Creditors, other liabilities, EMD, Advance recoverable in cash or kind and deposits are not reconciled. Several items in these accounts include long term pending balances, which are to be reviewed with party-wise details/breakup, recoverability and required provisions /adjustments, if any are to be made. Since the debit balances pertaining to certain parties have been incorrectly adjusted against the balances of the certain sundry creditors accounts and vice versa and net balances are disclosed in the Balance Sheet instead of disclosing balance payable/recoverable.

9. During the year the Company has not recognized an expense of Rs.51.86 lakhs as payable to GOK for guarantee commission – Based on a order pertaining to 2008-09 from GOK.

10. The Company has not provided the following liabilities:

a. Due to difference in Turn over in Form no 240 and Work in Progress submitted to head office VAT liability due to this difference has not been ascertained and provided for (Refer para 19(b) of schedule 19).

b. Liquidated damages for BCM Hostel project Rs.37.68 lakhs ( Refer para 16 of schedule 19).

ಇ) ನಿಗದಿತ ವೇಳೆಯಲ್ಲಿ ಜಬಲ್‌ಪುರ್ ಯೋಜನೆಯ ಕಾಮಗಾರಿ ಪೂರ್ಣಗೊಳಿಸದಿದ್ದ ಕಾರಣದಿಂದಾಗಿ ಸಂದಾಯ ಮಾಡಿದ ರೂ.201.21 ಲಕ್ಷದಲ್ಲಿ ಇಎಂಡಿ, ಕಾರ್ಯಾಧಾರಿತ ಭದ್ರತಾ ಠೇವಣಿ, ಕಾಮಗಾರಿ ವಹಿಸಿದ ಇಲಾಖೆಯಲ್ಲಿರುವ ಭದ್ರತಾ ಠೇವಣಿ, ಕಾಮಗಾರಿ ವಹಿಸಿದ ಇಲಾಖೆಯಲ್ಲಿರುವ ಹೆಚ್ಚುವರಿ ಭದ್ರತಾ ಠೇವಣಿಗಳನ್ನು, ವಹಿಸಿಕೊಟ್ಟ ಪ್ರಾಧಿಕಾರ ಮುಟ್ಟುಗೋಲು ಹಾಕಿಕೊಂಡಿವೆ. (ಉಲ್ಲೇಖ ಅನುಸೂಚಿ–19ರ ಕಂಡಿಕೆ 19). ಮುಂದುವರೆದು ರೂ.511.51 ಲಕ್ಷಗಳ ಮುಂಗಡ ಹಣವನ್ನು ಗುತ್ತಿಗೆದಾರರು ಈ ವಿಭಾಗದ ಕಾಮಗಾರಿಗಳನ್ನು ನಿರ್ವಹಿಸಲು ಈ ಹಣವನ್ನು ವಿಸ್ತರಿಸಿದ್ದಾರೆ. ಕಾಮಗಾರಿಯು ಸ್ಥಗಿತಗೊಂಡು ನಷ್ಟ ಉಂಟಾಗಿರುತ್ತದೆ.

ಆದುದರಿಂದ, ಪ್ರಸಕ್ತ ಸಾಲಿನ ದಾಯಿತ್ವ ಲಾಭಾಂಶವು ಖಚಿತವಾಗಿಲ್ಲ. ಈ ಮೇಲಿನ ಕಂಡಿಕೆ 3 ಮತ್ತು 10 ರಂತೆ ಕಡಿಮೆ ಅವಕಾಶ ಮತ್ತು ಹೆಚ್ಚಿನ ಆದಾಯವನ್ನು ಗುರುತಿಸಿ ಪಟ್ಟಿ ಮಾಡಿದೆ.

11. ಕಂಪನಿಯ ವಿರುದ್ಧವಾಗಿ 103 ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುತ್ತದೆ. ಈ ಪ್ರಕರಣಗಳಿಗೆ ಸಂಬಂಧಪಟ್ಟ ಮೊತ್ತದ ಮತ್ತು ದಾಯಿತ್ವದ ಬಗ್ಗೆ ಮಾಹಿತಿಯನ್ನು ಒದಗಿಸಿರುವುದಿಲ್ಲ. ಈ ಪ್ರಕರಣಗಳು ಕೈ ಬಿಟ್ಟು ಸಂದರ್ಭದಲ್ಲಿ ಇದರಿಂದ ಯಾವುದೇ ರೀತಿಯ ಪರಿಣಾಮ ಉಂಟಾಗುವುದಿಲ್ಲ. ಇದರ ಪರಿಣಾಮವಾಗಿ ಸಾದಿಲ್ವಾರು ದಾಯಿತ್ವಗಳು ಲೆಕ್ಕಪತ್ರಗಳ ಟಿಪ್ಪಣಿಯಲ್ಲಿ ಉಳಿದಿರುತ್ತದೆ.

12. 31–03–2011ರಂದು ಇದ್ದಂತೆ, ಕೆಲಸ ಬಾಕಿ ಹೊಂದಾಣಿಕೆಯ ಮೌಲ್ಯ ರೂ.983.12 ಕೋಟಿ ರೂಪಾಯಿ ಮತ್ತು ಈ ಮೊತ್ತವನ್ನು ಚಾಲ್ತಿ ಸ್ವತ್ತುಗಳಲ್ಲಿ ಸೇರಿಸಲಾಗಿದೆ. 31–03–2011ರಂದು ಇದ್ದಂತೆ ಕೆಲಸ ವಹಿಸಿರುವ ಏಜೆನ್ಸಿಗಳಿಂದ ಬಾಕಿ ಇರುವ ಮೊತ್ತ ರೂ.1399.91 ಕೋಟಿ ರೂಪಾಯಿ ಮೊತ್ತವನ್ನು ಚಾಲ್ತಿ ಹೊಣೆಗಾರಿಕೆಗಳಲ್ಲಿ ಸೇರಿಸಲಾಗಿದೆ. ಕೆಲಸ ವಹಿಸುವ ಏಜೆನ್ಸಿಗಳಿಂದ ಸ್ವೀಕರಿಸಿರುವ ಮೊತ್ತಕ್ಕೆ ಸಂಬಂಧಿಸಿದಂತೆ ಗ್ರಾಹಕವಾರು ಅನುಸೂಚಿಗಳ ಹೊಂದಾಣಿಕೆಯಾಗಬೇಕಿರುತ್ತದೆ. ಗ್ರಾಹಕವಾರು ಅನುಸೂಚಿಗಳಿಲ್ಲದೆ, ಜಮಾ ಖರ್ಚು ಪಟ್ಟಿಯಲ್ಲಿ ತೋರಿಸಿರುವ ಬಾಕಿಯನ್ನು ಪರಿಶೀಲಿಸಲಾಗುವುದಿಲ್ಲ. ಕೆಲವೊಂದು ಪ್ರಕರಣಗಳಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಕಾಮಗಾರಿ ವಹಿಸಿದ ಏಜೆನ್ಸಿಯವರಿಗೆ ಕಾಲದಿಂದ ಕಾಲಕ್ಕೆ ವರ್ಗಾಯಿಸಲಾಗಿದೆ. ಆದರೆ ತತ್ಸಂಬಂಧ ಹೊಂದಾಣಿಕೆಗಳನ್ನು ಕಾಮಗಾರಿ ವಹಿಸಿದ ಕಾಮಗಾರಿಗಳನ್ನು ಹೊಂದಾಣಿಕೆ ಮಾಡಿರುವುದಿಲ್ಲ. ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಹೊಂದಾಣಿಕೆ ಮಾಡದೇ ಇರುವುದರಿಂದ ಇವುಗಳನ್ನು ಸರಿಯಾಗಿ ಗುರುತಿಸಲಾಗುವುದಿಲ್ಲ.

13. ಮೇಲಿನ 2, 3 ಮತ್ತು 12ನೇ ಕಂಡಿಕೆಯಲ್ಲಿ ಉಲ್ಲೇಖಿಸಲಾಗಿರುವ ಅನುಬಂಧದಲ್ಲಿ ವ್ಯಕ್ತಪಡಿಸಿರುವ ನಮ್ಮ ಅಭಿಪ್ರಾಯಗಳಿಗೆ ಒಳಪಟ್ಟು ಮತ್ತು ಹೆಚ್ಚಿಗೆಯಾಗಿ ಈ ಮುಂದಿನ ವರದಿ ಮಾಡುತ್ತೇವೆ:

ಅ) ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕೆ ಅಗತ್ಯವೆಂದು ನಾವು ತಿಳಿದಿರುವ ಮತ್ತು ನಂಬಿರುವ ಎಲ್ಲ ಮಾಹಿತಿ ಮತ್ತು ವಿವರಣೆಗಳನ್ನು ಪಡೆದುಕೊಂಡಿದ್ದೇವೆ;

c. *Payment made towards EMD, Performance security deposit, security deposit with EA, Additional Security deposit with EA during the year 2005,which has been forfeited by EA for Jabalpur Project Rs.201.21 lakhs (Refer para 17 of schedule 19) & further a advance of Rs. 511.51 lakhs was extended to the contractor to carryout the works for this project has been absconding, however company has not provided for both the above losses.*

*Hence, Profit for the year is over stated to the extent of liability not ascertained, short provision and excess income recognisation as listed in para 3 to 10 above.*

11. *There are about 103 cases have been filed against the company are pending, in various courts, company has not provided the information on the amount involved in these cases & the amount of liability which may arise in the event of company loosing these cases have not been quantified. Consequently contingent liability amount stated in the notes on accounts has been understated to this extent.*

12. *Rs. 983.12 crores is the value of Work Pending Adjustments as on 31.03.2011 and this amount is included in the Current Assets. Amount received from Entrusting Agencies is Rs.1399.91 crores as on 31.03.2011 and this amount is included in Current Liabilities. Party wise Schedules are yet to be reconciled and confirmation to be received from Entrusting Agencies. Pending this, balances shown in Balance Sheet are not verifiable. Though in certain cases the work has been completed and the job are handed over to the Entrusting Agencies from time to time, consequential adjustments are not effected in the advance received from Entrusting Agency. Non-Adjustments of these accounts resulted in over statement of Current Assets and Current Liabilities. The amount of such over statement and resultant impact, if any, on the Profit and Loss Account cannot be ascertained.*

13. Further to and subject to our comments in the Annexure referred to in paragraph 2 and qualifications listed in para 3to 12 above, we report that:

a) We have obtained all the information and explanations which to the best of our knowledge and belief were necessary for the purpose of our audit;

ಆ) ಕಾನೂನು ಅಗತ್ಯಪಡಿಸುವ ಸರಿಯಾದ ಲೆಕ್ಕ ಪುಸ್ತಕಗಳನ್ನು ಕಂಪನಿ ನಿರ್ವಹಿಸಿದೆಯೆಂದು ಆ ಪುಸ್ತಕಗಳನ್ನು ನಾವು ಪರಿಶೀಲಿಸಿದುದರಿಂದ ತಿಳಿದು ಬಂದಿದೆ.

ಇ) ಈ ವರದಿಯಲ್ಲಿ ಪರಿಶೀಲಿಸಲಾಗಿರುವ ಜಮಾ ಖರ್ಚು ಪಟ್ಟಿ, ಲಾಭ ಮತ್ತು ನಷ್ಟಗಳ ಲೆಕ್ಕ ಮತ್ತು ನಗರದು ಹರಿವು ಲೆಕ್ಕ ಪುಸ್ತಕಗಳೊಂದಿಗೆ ತಾಳೆಯಾಗುತ್ತವೆ.

ಈ) ನಮ್ಮ ಅಭಿಪ್ರಾಯದಲ್ಲಿ, ಈ ವರದಿಯಲ್ಲಿ ಪರಿಶೀಲಿಸಲಾಗಿರುವ ಜಮಾ ಖರ್ಚು ಪಟ್ಟಿ ಮತ್ತು ಲಾಭ ನಷ್ಟಗಳ ಲೆಕ್ಕ ಮತ್ತು ನಗದು ಹರಿವು ವಿವರಣ ಪಟ್ಟಿಗಳು ಕಂಪನಿಗಳ ಅಧಿನಿಯಮ,1956ರ 211ನೇ ಪ್ರಕರಣ (3ಸಿ) ಪ್ರಕರಣದಲ್ಲಿ ಉಲ್ಲೇಖಿಸಲಾದ ಕಡ್ಡಾಯ ಲೆಕ್ಕ ನಿರ್ವಹಣೆ ಮಾನದಂಡಗಳಿಗೆ ಅನುಸಾರವಾಗಿದೆ.

ಉ) ಕಂಪನಿ ವ್ಯವಹಾರಗಳ ಇಲಾಖೆಯು 21 ಅಕ್ಟೋಬರ್ 2003ರಂದು ಹೊರಡಿಸಿದ ಮತ್ತು ಭಾರತದ ರಾಜಪತ್ರ, ವಿಶೇಷ ಸಂಚಿಕೆ ಭಾಗ 2, ವಿಭಾಗ 3 (1) ರಲ್ಲಿ ಪ್ರಕಟವಾದ ಅಧಿಸೂಚನೆ ಸಂ.ಜಿಎಸ್ಆರ್ 829 (ಇ) ಪ್ರಕಾರ ಈ ಕಂಪನಿಯು ಸರ್ಕಾರಿ ಕಂಪನಿಯಾಗಿರುವುದರಿಂದ ಕಂಪನಿಗಳ ಅಧಿನಿಯಮ, 1956ರ 274ನೇ ಪ್ರಕರಣದ (1)ನೇ ಉಪ ಪ್ರಕರಣದ (ಜಿ) ಖಂಡದ ನಿಬಂಧನೆಗಳಲ್ಲಿರುವ ನಿರ್ದೇಶಕರ ಅನರ್ಹತೆಗಳಿಗೆ ಸಂಬಂಧಿಸಿದ ಉಪಬಂಧಗಳು ಈ ಕಂಪನಿಗೆ ಅನ್ವಯವಾಗುವುದಿಲ್ಲ.

14. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ದೊರೆತ ಮಾಹಿತಿಯ ಮಟ್ಟಿಗೆ ಮತ್ತು ನಮಗೆ ನೀಡಿರುವ ವಿವರಣೆಗಳ ಪ್ರಕಾರ, ಸದರಿ ಲೆಕ್ಕಗಳು, ಪ್ರಮುಖ ಲೆಕ್ಕ ನಿರ್ವಹಣೆ ನೀತಿಗಳೊಂದಿಗೆ ಮತ್ತು ಅದರ ಮೇಲೆ ಮಾಡಿದ ಇತರ ಟಿಪ್ಪಣಿಗಳೊಂದಿಗೆ ಓದಿಕೊಂಡಂತೆ;

ಅ) 2011ರ ಮಾರ್ಚ್ 31ರಂದು ಇದ್ದಂತೆ ಕಂಪನಿಯ ಪ್ರಸ್ತುತ ಪರಿಸ್ಥಿತಿಯ ಜಮಾ ಖರ್ಚು ಪಟ್ಟಿಗೆ ಸಂಬಂಧಪಡುವಷ್ಟರ ಮಟ್ಟಿಗೆ.

ಆ) ಆ ದಿನಾಂಕದಂದು ಕೊನೆಗೊಳ್ಳುವ ವರ್ಷಕ್ಕೆ ಕಂಪನಿಯ ನಷ್ಟದ ಲಾಭ ಮತ್ತು ನಷ್ಟ ಲೆಕ್ಕಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ.

ಇ) ಆ ದಿನಾಂಕದಂದು ಕೊನೆಗೊಳ್ಳುವ ವರ್ಷಕ್ಕೆ ಕಂಪನಿಯ ನಗದು ಹರಿವು ನಗದು ಹರಿವು ವಿವರಣಾ ಪಟ್ಟಿಗೆ ಸಂಬಂಧಪಡುವಷ್ಟರ ಮಟ್ಟಿಗೆ.

**ಜ್ಞಾನೋಬ ಮತ್ತು ಭಟ್**
**ಚಾರ್ಟೆರ್ಡ್ ಅಕೌಂಟೆಂಟ್ಸ್** ಇವರ ಪರವಾಗಿ
ಎಫ್.ನಂ.000939S

**ಸಹಿ/-**
**(ನವೀನ್ ನಾಯಕ್. ಕೆ)**
ಪಾಲುದಾರರು
ಸದಸ್ಯತ್ವ ಸಂಖ್ಯೆ:205154

ಸ್ಥಳ: ಬೆಂಗಳೂರು
ದಿನಾಂಕ:30-09-2011

b) In our opinion, proper books of accounts as required by law have been kept by the Company, so far as it appears for the purpose of those books;

c) The Balance sheet, profit and loss account and cash flow statement dealt with by this report is in agreement with the books of account;

d) In our opinion, the Balance sheet and profit and loss Account and cash flow Statement dealt with by this report comply with the mandatory Accounting Standards referred in sub-section (3C) of section 211 of the companies Act , 1956;

e) The provisions regarding Disqualification of Directors in terms of clause (g) of sub-section (1) of section 274 of the companies Act, 1956 is not applicable to this company, being a Government company as per Notification NO GSR 829(E) Dated 21st October 2003 issued by the Department of Company affairs and Published in the Gazette of India, Extraordinary Part II Section 3(1).

14. In our opinion and to the best of our information and according to the explanations given to us, the said accounts, read with other notes thereon, give the information required by the Companies Act, 1956, in the manner so required and give a true and fair view in conformity with the accounting principles generally accepted in India:

a) In the case of the Balance Sheet, of the State of affairs of the Company as at 31st March 2011 and

b) In the case of Profit & Loss account, of the Profit of the Company for the year ended as on that date.

c) In the case of Cash flow statement, of the cash flows of the company for the year ended 31st March 2011.

For **GNANOBA & BHAT**
**CHARTERED ACCOUNTANTS**
FIRM REGN NO: 000939S

**Sd/-**
**(NAVIN NAYAK K.)**
PARTNER
M.NO: 205154

PLACE: BANGALORE
DATE : 30.09.2011

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್ ಇದರ 2011ರ ಸೆಪ್ಟಂಬರ್ 30ನೇ ದಿನಾಂಕದ ಲೆಕ್ಕಪರಿಶೋಧಕರ ವರದಿಗೆ ಅನುಬಂಧ

# ANNEXURE TO AUDITOR' S REPORT DATED 30TH SEPTEMBER, 2011 OF KARNATAKA RURAL INFRASTRUCTURE DEVELOPMENT LIMITED

## ಅನುಬಂಧ–I

ಅದೇ ದಿನಾಂಕದ ನಮ್ಮ ವರದಿಯ ಕಂಡಿಕೆ 2ರಲ್ಲಿ ಉಲ್ಲೇಖಿಸಲಾಗಿದೆ.

1. **ಸ್ಥಿರ ಆಸ್ತಿಗಳು:**

ಎ) ಕಂಪನಿಯು, ಸ್ಥಿರ ಆಸ್ತಿಯ ಸ್ಥಳ ಮತ್ತು ಪ್ರಮಾಣದ ವಿವರಗಳೂ ಒಳಗೊಂಡಂತೆ ಪೂರ್ಣ ವಿವರಗಳನ್ನು ತೋರಿಸುವ ಸರಿಯಾದ ದಾಖಲೆಗಳನ್ನು ಇಟ್ಟಿದೆ.

ಬಿ) ಆಡಳಿತ ಮಂಡಳಿಯು ಸ್ಥಿರ ಆಸ್ತಿಗಳನ್ನು ಭೌತಿಕವಾಗಿ ಪರಿಶೀಲನೆ ಮಾಡಿದೆ. ನಮ್ಮ ಅಭಿಪ್ರಾಯದಲ್ಲಿ ಪರಿಶೀಲನೆ ಸಹ ಸಮರ್ಪಕವಾಗಿದೆ, ಅದಾಗ್ಯೂ ಭೌತಿಕ ತಪಾಸಣಾ ಪಟ್ಟಿಯನ್ನು ಸ್ಥಿರ ಆಸ್ತಿಗಳ ಪಟ್ಟಿಯನ್ನು ದಾಸ್ತಾವೇಜು ದಾಖಲೆಗೆ ಹೊಂದಾಣಿಕೆ ಮಾಡಿರುವುದಿಲ್ಲ ಮತ್ತು ವ್ಯತ್ಯಾಸವೇನಾದರೂ ಇದ್ದಲ್ಲಿ ಹೊಂದಾಣಿಕೆಯಾಗದೆ ಉಳಿದಿದೆ.

ಸಿ) ನಿಗಮವು ಹೆಚ್ಚಿನ ಸ್ಥಿರ ಆಸ್ತಿಗಳನ್ನು ಪ್ರಸಕ್ತ ವರ್ಷದಲ್ಲಿ ಮಾರಾಟ ಮಾಡಿರುವುದಿಲ್ಲ. ಆದುದರಿಂದ ಕಂಪನಿಯು ಮುಂದುವರಿಕೆಗೆ ಇದರಿಂದ ಯಾವುದೇ ಹಾನಿಯಾಗಿಲ್ಲ.

2. **ಸಾಮಗ್ರಿಗಳ ಬಗ್ಗೆ**

ಎ) ನಮಗೆ ವರದಿ ಮಾಡಿದ ಪ್ರಕಾರ ಕಟ್ಟಡ ಸಾಮಗ್ರಿಗಳನ್ನು ಆಡಳಿತ ಮಂಡಳಿಯು ಭೌತಿಕವಾಗಿ ಪರಿಶೀಲನೆ ಮಾಡಿದೆ ಅದಾಗ್ಯೂ ಪರಿಶೀಲನಾ ಅಂತರದ ಸಂಖ್ಯೆಗಳನ್ನು ನಿಗಮದ ವಹಿವಾಟಿಗೆ ಅನುಸಾರವಾಗಿ ಇನ್ನು ಹೆಚ್ಚಿನ ಅಗತ್ಯವಿರುತ್ತದೆ.

ಬಿ) ನಮ್ಮ ಅಭಿಪ್ರಾಯದಲ್ಲಿ ನಮಗೆ ಕೊಟ್ಟಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಸಾಮಗ್ರಿಗಳ ಭೌತಿಕ ತಪಾಸಣೆ ಕಂಪನಿಯ ಗಾತ್ರ ಮತ್ತು ವ್ಯವಹಾರದ ಪದ್ಧತಿಗೆ ಸಮಂಜಸ–ವಾಗಿರುತ್ತದೆ.

ಸಿ) ನಮ್ಮ ಅಭಿಪ್ರಾಯದಲ್ಲಿ ನಮಗೆ ಕೊಟ್ಟಿರುವ ವಿವರಣೆಗಳ ಪ್ರಕಾರ ಕಂಪನಿಯು ಸೂಕ್ತ ಲೆಕ್ಕ ಪತ್ರಗಳನ್ನು ಸಾಮಗ್ರಿಗಳ ನಿರ್ವಹಣೆಗೆ ಇಟ್ಟಿರುತ್ತದೆ ಮತ್ತು ಭೌತಿಕ ತಪಾಸಣೆಯ ಸಮಯದಲ್ಲಿ ಯಾವುದೇ ಸಾಮಗ್ರಿಗಳ ಕುಂದು ಕೊರತೆಗಳು ಕಂಡು ಬಂದಿರುವುದಿಲ್ಲ.

3. ಕಂಪನಿಯು, ಕಂಪನಿಗಳ ಅಧಿನಿಯಮ, 1956ರ 301ನೇ ಪ್ರಕರಣದ ಅಡಿಯಲ್ಲಿ ನಿರ್ವಹಿಸಿರುವ ರಿಜಿಸ್ಟರಿನಲ್ಲಿ ಪಟ್ಟಿ ಮಾಡಿರುವ ಕಂಪನಿಗಳು, ಫರ್ಮುಗಳ ಅಥವಾ ಇತರ ಪಕ್ಷಕಾರರಿಂದ ಭದ್ರತೆಯಿರುವ ಅಥವಾ ಭದ್ರತೆಯಿಲ್ಲದಿರುವ ಸಾಲಗಳನ್ನು ಮಂಜೂರು ಮಾಡಿಲ್ಲ ಅಥವಾ ತೆಗೆದುಕೊಂಡಿಲ್ಲ.

## ANNEXURE 1

Referred to in paragraph 2 of our report of even date

1. **In respect of its fixed assets**

a. The Company has maintained proper records showing full particulars including quantitative details and situation of Fixed Assets.

b. *The fixed assets have been physically verified by the management. In our opinion the frequency of verification is reasonable. However, Physical verification statements have not been reconciled with the fixed asset register and difference if any, remained unadjusted.*

c. The company has not disposed off substantial parts of fixed assets during the year. Accordingly there is no question of the going concern being affected.

2. **In respect of inventories**

a. As explained to us inventories were physically verified by the management, however frequency of such verification needs to be increased so that it is commensurate with the business of the company.

b. In our opinion, and according to the information and explanation given to us, the procedures of physical verification of inventories followed by the management were reasonable and adequate in relation to the size of the company and the nature of the business.

c. In our opinion, and according to the information and explanation given to us, the company has maintained proper books of its inventories and no material discrepancies were noticed on physical verification.

3. The Company has neither granted nor taken loans, secured or unsecured from Companies, firms or other parties listed in the register maintained under section 301 of the Companies Act, 1956.

4. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಬೆಲೆ ಪಟ್ಟಿಯಲ್ಲಿರುವ ಎಲ್ಲ ಸಾಮಾನುಗಳ ಖರೀದಿಗೆ ಮತ್ತು ಸ್ಥಿರ ಆಸ್ತಿಗಳ ಮತ್ತು ಸರಕುಗಳು, ನಿರ್ಮಾಣ ಸಾಮಗ್ರಿಗಳು, ಸ್ಥಾವರಗಳು ಮತ್ತು ಯಂತ್ರ ಸಾಮಗ್ರಿಗಳು ಮತ್ತು ಪರಿಕರಗಳು ಮತ್ತು ಇತರ ನಿರ್ಮಾಣ ಸ್ವೀಕೃತಿಗಳಿಗೆ ಸಂಬಂಧಿಸಿದಂತೆ ಇತರ ಸ್ವತ್ತುಗಳ ಖರೀದಿಗೆ ಕಂಪನಿಯ ಗಾತ್ರ ಮತ್ತು ಅದರ ವ್ಯವಹಾರದ ಸ್ವರೂಪಕ್ಕೆ ಅನುಗುಣವಾಗಿ ಪರ್ಯಾಪ್ತ ಆಂತರಿಕ ನಿಯಂತ್ರಣ ವಿಧಾನಗಳಿಲ್ಲ. ನಾವು ಲೆಕ್ಕ ಪರಿಶೋಧನೆ ಮಾಡುವಾಗ, ನಿರ್ಮಾಣ ಸಾಮಗ್ರಿ ಮುಂತಾದುವನ್ನು ಖರೀದಿ ಮಾಡುವುದಕ್ಕೆ ಸಂಬಂಧಿಸಿದಂತೆ ಆಂತರಿಕ ನಿಯಂತ್ರಣ ಕಾರ್ಯವಿಧಾನಗಳಲ್ಲಿರುವ ಮುಖ್ಯ ದೋಷವನ್ನು ಸರಿಪಡಿಸುವಲ್ಲಿ ಎಂದರೆ ನಿರ್ಧಿಷ್ಟವಾಗಿ ಮುಂಗಡಗಳ ಲೆಕ್ಕಗಳು ಇತ್ಯಾದಿಗಳನ್ನು ಹೊಂದಾಣಿಕೆ ಮಾಡುವಲ್ಲಿ ವಿಫಲರಾಗುತ್ತಲೇ ಇರುವುದನ್ನು ಗಮನಿಸಿದ್ದೇವೆ.

5. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಗಳ ಅಧಿನಿಯಮ 1956ರ 301ನೇ ಪ್ರಕರಣದ ಮೇರೆಗೆ ನಿರ್ವಹಿಸಲಾದ ರಿಜಿಸ್ಟರಿನಲ್ಲಿ ನಮೂದಿಸಬೇಕಾದ ಯಾವುವೇ ವ್ಯವಹಾರಗಳು ಇಲ್ಲ ಎಂದು ನಾವು ಅಭಿಪ್ರಾಯ ಪಡುತ್ತೇವೆ.

6. ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಕಂಪನಿಗಳ ಅಧಿನಿಯಮ 1956ರ 58ಎ ಪ್ರಕರಣದ ಉಪಬಂಧಗಳು ಅನ್ವಯಿಸುವುದಿಲ್ಲ.

7. ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು ತನ್ನ ಗಾತ್ರ ಮತ್ತು ವ್ಯವಹಾರ ಸ್ವರೂಪಕ್ಕೆ ಅನುಗುಣವಾದ ಆಂತರಿಕ ಲೆಕ್ಕಪರಿಶೋಧನೆಯ ವ್ಯವಸ್ಥೆಯನ್ನು ಹೊಂದಿದೆ. ಆದರೆ ಮುಂದಿನ ದಿನಗಳಲ್ಲಿ ಆಂತರಿಕ ಲೆಕ್ಕ ಪರಿಶೋಧನೆಯನ್ನು ಬಲಪಡಿಸಬೇಕಾಗಿದೆ.

8. ಭಾರತ ಸರ್ಕಾರವು, ಕಂಪನಿಗಳ ಅಧಿನಿಯಮ 1956ರ 209 (1) (ಡಿ) ಪ್ರಕರಣದ ಅಡಿಯಲ್ಲಿ ದಾಖಲೆಗಳ ನಿರ್ವಹಣಾ ವೆಚ್ಚವನ್ನು ನಿಗದಿಪಡಿಸಿಲ್ಲ.

9. ಭವಿಷ್ಯ ನಿಧಿ (ಪಿ.ಎಫ್), ಇಎಸ್ಐ, ವರಮಾನ ತೆರಿಗೆ, ಮಾರಾಟ ತೆರಿಗೆ, ಸಂಪತ್ತು ತೆರಿಗೆ, ಸೀಮಾ ಶುಲ್ಕ, ಅಬ್ಕಾರಿ ತೆರಿಗೆ ಮತ್ತು ಇತರ ಶಾಸನಬದ್ಧ ಬಾಕಿಗಳೂ ಸೇರಿದಂತೆ ವಿವಾದರಹಿತವಾದ ಶಾಸನಬದ್ಧ ಬಾಕಿಗಳನ್ನು ಸ್ವಲ್ಪ ತಡವಾಗಿ ಕಂಪನಿಯು ನಿಯತವಾಗಿ ಸಂದಾಯ ಮಾಡುತ್ತಿದೆ.

(ಎ) ಕಂಪನಿಯ ದಾಖಲೆಗಳನುಸಾರವಾಗಿ ಮತ್ತು ನಮಗೆ ನೀಡಿದ ಮಾಹಿತಿ ಹಾಗೂ ವಿವರಣೆಯ ಪ್ರಕಾರ, ಕಂಪನಿಯು, ಸಂಪತ್ತು ತೆರಿಗೆ ಹೊರತಾಗಿ ರೂ.10.73 ಲಕ್ಷಗಳು, 2011ರ ಮಾರ್ಚ್ 31ರಂದು ಇರುವಂತೆ ಆರು ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ ಯಾವುವೇ ಬಾಕಿಗಳು ಎಂದರೆ, ಭವಿಷ್ಯ ನಿಧಿ, ವರಮಾನ ತೆರಿಗೆ, ಸೀಮಾಶುಲ್ಕ, ಅಬ್ಕಾರಿ ಶುಲ್ಕ, ಉಪಕರ (ಸೆಸ್) ಮತ್ತು ಯಾವುದೇ ಇತರ ಶಾಸನಬದ್ಧ ಬಾಕಿಗಳು ಒಳಗೊಂಡಂತೆ ಅವಿವಾದಿತ ಯಾವುದೇ ಶಾಸನಬದ್ಧ ಬಾಕಿಗಳನ್ನು ಉಳಿಸಿಕೊಂಡಿಲ್ಲ.

4. *In our opinion and according to the information and explanations given to us, there are no adequate internal control procedures commensurate with the size of the Company and nature of its business for the purchase of inventory, fixed assets and also purchase of stores, construction materials, plant and machinery and equipments and other assets with regard to other construction receipts. During the course of our audit, we have observed continuing failure to correct major weakness in internal control procedures with regard to purchase of construction materials etc., more particularly by not reconciling advances accounts etc.*

5. According to the information and explanations given to us, we are of the opinion that there no transactions that need to be entered into the register to be maintained under section 301 of the Companies Act, 1956.

6. In our opinion and according to the information and explanations given to us the Company has not taken any deposits from public and hence provisions of Section 58A of the companies Act, 1956 is not applicable.

7. In our opinion, the Company has an internal audit system commensurate with the size and nature of its business. *However, Internal Audit process requires to be strengthened further.*

8. The Government of India has not prescribed the maintenance of cost records u/s 209 (1) (d) of the Companies Act, 1956.

9. The Company is generally regular in depositing undisputed statutory dues including PF, ESI, Income tax, Sales tax, Wealth Tax, Customs duty, Excise Duty and other Statutory dues barring few delays.

